29 ಆಗಸ್ಟ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 169 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ


# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಎಲ್ಲಾ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿರುವ ಟೀಮ್ ಇಂಡಿಯಾದ ಕಲಾತ್ಮಕ ಬ್ಯಾಟರ್ ಚೇತೇಶ್ವರ ಪೂಜಾರ, ಭವಿಷ್ಯದಲ್ಲಿ ಕೋಚಿಂಗ್ ಹುದ್ದೆ ವಹಿಸುವ ಬಗ್ಗೆ ಉತ್ಸುಕತೆ ತೋರಿದ್ದಾರೆ.


ಆ.29ಕ್ಕೆ ಅಂದೊಂದಿತ್ತು ಕಾಲ » 2


ಗಾಂಧಿ ಕುಟುಂಬ ಖುಷಿ ಪಡಿಸಲು ಹಿಂದೂಗಳಿಗೆ ಅಪಮಾನ » 3


ಅರಸೀಕೆರೆಯಲ್ಲಿ ಉದ್ಘಾಟನೆಯಾಗದ ಉಪ ಕಾರಾಗೃಹ » 4

# ರೈತರಿಗೆ ಸಕಾಲದಲ್ಲಿ ಸಾಲ ಸಿಗಲಿ : ಸಿ.ಎಂ.

## ಈ ವರ್ಷ 37 ಲಕ್ಷ ರೈತರಿಗೆ 28 ಸಾವಿರ ಕೋ.ರೂ. ಕೃಷಿ ಸಾಲದ ಗುರಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ 37 ಲಕ್ಷ ರೈತರಿಗೆ 28 ಸಾವಿರ ಕೋ. ರೂ. ಸಾಲ ವಿತರಣೆ ಗುರಿ ಹೊಂದಲಾಗಿದೆ. ಕೃಷಿಕರಿಗೆ ಸಕಾಲದಲ್ಲಿ ಕೃಷಿ ಸಾಲವನ್ನು ಸಿಗುವುದನ್ನು ಖಾತ್ರಿಪಡಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದರು.

ಗುರುವಾರ ಗೃಹಕಚೇರಿ ಕೃಷ್ಣಾದಲ್ಲಿ ಸಹಕಾರ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಜುಲೈ ಅಂತ್ಯದವರೆಗೆ 8,69,284 ರೈತರಿಗೆ 8362.68 ಕೋ.ರೂ. ಸಾಲ ವಿತರಣೆ ಮಾಡಲಾಗಿದೆ. ನಬಾರ್ಡ್ ರಿಯಾಯಿತಿ ಬಡ್ಡಿ ದರದ ಸಾಲದ ಮಿತಿಯನ್ನು ಹಿಂದಿನ ಸಾಲಿನಲ್ಲಿದ್ದ 5,600 ಕೋ.ರೂ.ಗಳಿಂದ 3, 236.11 ಕೋ.ರೂ.ಗೆ ಅಂದರೆ ಶೇ. 42.21ರಷ್ಟು ಕಡಿಮೆ ಮಾಡಿದೆ. ಆದರೂ ಸಾಲ ವಿತರಣೆಯಲ್ಲಿ ಶೇ. 96.07 ರಷ್ಟು ಪ್ರಗತಿ ಸಾಧಿಸಲಾಗಿದೆ. 2024-25ನೇ ಸಾಲಿನಲ್ಲಿ



29,75,598 ರೈತರಿಗೆ 25,939.09 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ನ ಅವ್ಯವಹಾರಗಳ ಕುರಿತು ಡಿಆರ್ ಸಿಎಸ್ ತನಿಖೆ ನಡೆಸುತ್ತಿದೆ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲೇ ಕೆಲವು ಸದಸ್ಯರ ಸದಸ್ಯತ್ವವನ್ನು ಪರಿಷತ್ ರದ್ದುಪಡಿಸುತ್ತಿರುವ ಕುರಿತು ದೂರುಗಳು ಬಂದಿದ್ದು, ಈ ಕುರಿತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಸೂಚನೆ ನೀಡಿದರು.

ಸಹಕಾರ ಸಂಘಗಳ ಹಿರಿಯ ನಿರೀಕ್ಷಕರ 126 ಹುದ್ದೆಗಳು ಹಾಗು ಸಹಕಾರ ಸಂಘಗಳ ನಿರೀಕ್ಷಕರ 403 ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದ ಅವರು, ಸಹಕಾರ ಸಂಘಗಳ ನಿಬಂಧಕರ ಕಚೇರಿಯ ವ್ಯಾಪ್ತಿಯ ಸೇವೆಗಳನ್ನು ಗಣಕೀಕರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ 7,074 ಗಿರವಿದಾರ ಸಂಸ್ಥೆಗಳು ಹಾಗು 1,468 ಚೀಟಿ ಸಂಸ್ಥೆಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 1961, ಕರ್ನಾಟಕ ಗಿರವಿದಾರರ ಅಧಿನಿಯಮ 1961 ಮತ್ತು ಚೀಟಿನಿಧಿಗಳ ಅಧಿನಿಯಮ 1982ರಡಿ ನೋಂದಣಿಯಾಗಿವೆ. ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗು ಚೀಟಿ ಸಂಸ್ಥೆಗಳ ಮೇಲೆ ನಿಗಾ ಇರಿಸಬೇಕೆಂದು ಹೇಳಿದರು.

ರಾಜ್ಯದಲ್ಲಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಹಕಾರ ಇಲಾಖೆ ಅಧಿಕಾರಿಗಳು ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

### ನಷ್ಟದಲ್ಲಿ 14,670 ಸಹಕಾರ ಸಂಘ

ರಾಜ್ಯದಲ್ಲಿ 28,516 ಸಹಕಾರ ಸಂಘಗಳು ಲಾಭದಲ್ಲಿದ್ದು, 14,670 ಸಂಘಗಳು ನಷ್ಟದಲ್ಲಿವೆ. ಸಾಲ ವಸೂಲಾತಿ ಸರಿಯಾಗಿ ಆಗದ ಕಾರಣ ಬಹುತೇಕ ಸಂಘಗಳು ನಷ್ಟದಲ್ಲಿವೆ. ಅಂತಹ ಸಂಘಗಳಲ್ಲಿ ಸಾಲ ವಸೂಲಾತಿಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು. ಅದರಲ್ಲಿ 2200 ಹಾಲು ಉತ್ಪಾದಕ ಸಂಘಗಳು ನಷ್ಟದಲ್ಲಿವೆ. ಹಾಲು ಉತ್ಪಾದಕ ಸಹಕಾರ ಸಂಘಗಳ ವೆಚ್ಚದ ಮೇಲೆ ನಿಗಾ ಇರಿಸಬೇಕು. ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು ಸಂಘಗಳ ಕಾರ್ಯದರ್ಶಿಗಳ ಜವಾಬ್ದಾರಿ. ಹಾಲು ಉತ್ಪಾದಕ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕೆಂದು ಸಿದ್ದರಾಮಯ್ಯ ಅವರು ನಿರ್ದೇಶನ ನೀಡಿದರು.

**ರಾಜಣ್ಣ ವಜಾದಿಂದ ಸಿಎಂ ಸಭೆ**

ಸಹಕಾರ ಸಚಿವರಾಗಿದ್ದ ಕೆ.ಎನ್. ರಾಜಣ್ಣ ವಜಾಗೊಂಡ ನಂತರ ಮೊದಲ ಪ್ರಗತಿ ಪರಿಶೀಲನಾ ಸಭೆ ಇದಾಗಿದೆ. ರಾಜಣ್ಣ ವಜಾ ನಂತರ ಮುಖ್ಯಮಂತ್ರಿ ಬಳಿಯೇ ಸಹಕಾರ ಖಾತೆ ಇರುವುದರಿಂದ ಸಭೆ ನಡೆಸಿದರು. ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಕಾನೂನು ಸಲಹೆಗಾರ ಪೊನ್ನಣ್ಣ, ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಬೆಂಗಳೂರಿನಲ್ಲೇ ಜೆಡಿಎಸ್ ರಾಜ್ಯ-ರಾಷ್ಟ್ರೀಯ ಕಾರ್ಯಕಾರಿಣಿ ಸಭೆ

• ಪ್ರಜೋದಯ ವರದಿ

**ಬೆಂಗಳೂರು:** ಜೆಡಿಎಸ್ ರಾಜ್ಯ ಕಾರ್ಯಕಾರಿಣಿ ಜೊತೆಗೆ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನಡೆಸುವ ಬಗ್ಗೆ ಪಕ್ಷದ ವರಿಷ್ಠರು ಚಿಂತನೆ ನಡೆಸುತ್ತಿದ್ದು, ಬೆಂಗಳೂರಿನಲ್ಲಿಯೇ ಆಯೋಜನೆಗೊಳ್ಳುವ ಸಾಧ್ಯತೆ ಇದೆ.

ರಾಷ್ಟ್ರೀಯ ಕಾರ್ಯಕಾರಿಣಿಯನ್ನು ದೆಹಲಿಯಲ್ಲಿ ಮಾಡಬೇಕೆನ್ನುವ ನಿಟ್ಟಿನಲ್ಲಿ ಪ್ರಯತ್ನ ನಡೆದಿತ್ತು. ಆದರೆ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಅವರ ಆರೋಗ್ಯದ ದೃಷ್ಟಿಯಿಂದ ಬೆಂಗಳೂರಿನಲ್ಲಿಯೇ ಆಯೋಜನೆ ಮಾಡುವುದು ಸೂಕ್ತ ಎನ್ನುವ ತೀರ್ಮಾನಕ್ಕೆ ಬರಲಾಗಿದೆ. ರಾಷ್ಟ್ರೀಯ ಕಾರ್ಯಕಾರಿಣಿ ನಡೆಯುವ ಸಂದರ್ಭದಲ್ಲಿಯೇ ರಾಜ್ಯ ಕಾರ್ಯಕಾರಿಣಿಯನ್ನು ನಡೆಸುವುದು ಸೂಕ್ತ ಎನ್ನುವುದು ಹಲವು ಮುಖಂಡರ ಅಭಿಪ್ರಾಯವಾಗಿರುವ ಹಿನ್ನಲೆ ಪಕ್ಷದ ಅಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಅವರು ಇದಕ್ಕೆ ಅಸ್ತು ಎಂದಿದ್ದಾರೆಂದು ಮೂಲಗಳು ತಿಳಿಸಿವೆ. ಬೆಂಗಳೂರಿನಲ್ಲಿಯೇ ಕಾರ್ಯಕಾರಿಣಿ ನಡೆಸುವುದು ನಿರ್ಧಾರ



ವಾಗಿದ್ದು, ಯಾವಾಗ ಮಾಡಬೇಕೆನ್ನುವ ನಿಟ್ಟಿನಲ್ಲಿ ಚರ್ಚೆ ನಡೆಯುತ್ತಿದೆ.

ಬಿಹಾರ ಚುನಾವಣೆ ಹತ್ತಿರ ಬರುತ್ತಿರುವ ಹಿನ್ನಲೆ ದೀಪಾವಳಿಗೆ ಮುನ್ನ ಆಯೋಜಿಸಿ ಸಂಘಟನಾತ್ಮಕ ಚಟುವಟಿಕೆ ಪರಾಮರ್ಶೆ ಮಾಡಬೇಕೆನ್ನುವುದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಮಾರ್ಗದರ್ಶನ ನೀಡಿದ್ದು, ಈ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿವೆ. ದೀಪಾವಳಿಗೂ ಮೊದಲು ಅಥವಾ ನಂತರ ಆಗ ಬಹುದೆಂದು ಮೂಲಗಳು ಖಚಿತಪಡಿಸಿವೆ. ಕಾರ್ಯಕಾರಿಣಿ ಸಭೆಯಲ್ಲಿ ರಾಜ್ಯದಲ್ಲಿ ಪಕ್ಷದ ಪದಾಧಿಕಾರಿಗಳ ಬದಲಾವಣೆಯೂ ಚರ್ಚೆಗೆ ಬರ ಬಹುದು. ಅಗತ್ಯವಿರುವ ಕಡೆಯಲ್ಲಿ ಪಕ್ಷದ ಪುನಾರಚನೆಗೂ ವರಿಷ್ಠರು ಮುಂದಾಗಬಹುದೆಂದು ಮೂಲಗಳು ಖಚಿತಪಡಿಸಿವೆ.

## ಮಾಸ್ತಿ ಕೊಲೆ ಪ್ರಕರಣ: ಮತ್ತೆ ಜೈಲು ಸೇರಿದ ರೌಡಿ ಶೀಟರ್ ಚೇತು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜೈಲಿನಲ್ಲಿದ್ದುಕೊಂಡೇ ರೌಡಿ ಶೀಟರ್ ಕೊಲೆಗೆ ಸಂಚು ರೂಪಿಸಿದ ಆರೋಪದಡಿ ಕುಖ್ಯಾತ ರೌಡಿ ಶೀಟರ್ ಯಾಚೇನಹಳ್ಳಿ ಚೇತು ಅಲಿಯಾಸ್ ಚೇತನ್ ಮತ್ತೆ ಜೈಲು ಪಾಲಾಗಿದ್ದಾನೆ.

ತಾಲ್ಲೂಕಿನ ಮತ್ತೊಬ್ಬ ರೌಡಿ ಶೀಟರ್ ಮಾಸ್ತಿ ಕೊಲೆ ಪ್ರಕರಣದಲ್ಲಿ ಈತನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಅದೇ ಪ್ರಕರಣದಲ್ಲಿ ಚೇತನ್ ಮತ್ತು ಇತರೆ 9 ಆರೋಪಿಗಳ ವಿರುದ್ಧ ಪಟ್ಟಣದ ನಾಲ್ಕನೇ ಸೆಷನ್ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿತ್ತು. ಅದಲ್ಲದೇ ಹಿಂದೆ ಹಲವಾರು ಕೊಲೆ, ಸುಲಿಗೆ ಪ್ರಕರಣಗಳಲ್ಲಿ ಈತ ಮೊದಲೇ ಜೈಲು ಸೇರಿದ್ದ. ಕಲಬುರಗಿ ಜೈಲಿನಲ್ಲಿದ್ದುಕೊಂಡೇ ತನ್ನ ಸಹಚರರಾದ ಶಿವು ಅಲಿಯಾಸ್ ಶಿವಕುಮಾರ್, ಉಲಿವಾಲ ಚೇತು ಹಾಗು ಇತರರಿಗೆ ಸುಪಾರಿ ಕೊಟ್ಟು ಮಾಸ್ತಿಯ ಹತ್ಯೆಗೆ ಬಂಧಿಖಾನೆ ಯಲ್ಲಿದ್ದೇ ಯೋಜನೆ ರೂಪಿಸಿದ್ದ. 2023ರ ಜುಲೈ 4 ರಂದು ಪಟ್ಟಣದ ಮುಖ್ಯ ರಸ್ತೆಯಲ್ಲಿ ಮಾಸ್ತಿ ಹತ್ಯೆಯಾಗಿತ್ತು.

**ಮಾಸ್ತಿ-ಚೇತು ಕಾದಾಟ**



ಸ್ನೇಹಿತರಂತೆಯೇ ಇದ್ದ ಮಾಸ್ತಿ ಹಾಗು ಚೇತು ಕಾದಾಟ ಪರಸ್ಪರ ಹೊಡೆದಾಟ ಮಾತ್ರ ವಲ್ಲದೆ ಕೊಲೆ ಹಂತಕ್ಕೆ ಬಂದು ನಿಂತಿತ್ತು. ಉದ್ಯಮಿಗಳಿಗೆ ಹಣದ ಆಮಿಷ, ಅಪಹರಣ, ಸಣ್ಣ-ಪುಟ್ಟ ಕಳ್ಳತನ ಮಾಡಿಕೊಂಡಿದ್ದ ಚೇತು 2012ರಲ್ಲಿ ಪಟ್ಟಣದ ನವೋದಯ ವೃತ್ತದಲ್ಲಿ ಡಬಲ್ ಮರ್ಡರ್ ಮಾಡಿ ರೌಡಿ ಪಟ್ಟಿಗೆ ಸೇರಿಬಿಟ್ಟ. ಇದೇ ವೇಳೆ ವ್ಯವಹಾರಿಕವಾಗಿ ಮಾಸ್ತಿ ಜೊತೆ ಗಲಾಟೆ ಶುರುವಾಗಿ ಅವನ ಕೊಲೆಗೂ ಅನೇಕ ಪ್ರಯತ್ನ ನಡೆಸಿದ್ದ. ಚಾಮರಾಜನಗರ ಜಿಲ್ಲೆಯ ಪ್ರವಾಸಕ್ಕೆಂದು ಕಾರಿನಲ್ಲಿ ಮಾಸ್ತಿಯನ್ನು ಕರೆದುಕೊಂಡು ಹೋಗಿದ್ದ ಚೇತು ದಟ್ಟಾರಣ್ಯದಲ್ಲಿ ಮಾಸ್ತಿ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆಗೆ ಯತ್ನಿಸಿದ್ದ. ತನ್ನ ಗುರಿ ಯಾವ ಕಾರಣಕ್ಕೂ ತಪ್ಪುವುದಿಲ್ಲ, ಮಾಸ್ತಿ ಸತ್ತಿದ್ದಾನೆಂದು ಖುಷಿಯಲ್ಲೇ ವಾಪಾಸ್ಸಾಗಿದ್ದ. ಪ್ರಾಣಾಪಾಯದಿಂದ ಪಾರಾಗಿದ್ದ ಮಾಸ್ತಿ ಸ್ಥಳೀಯರ ನೆರವಿನಿಂದ ಪಾರಾಗಿ ಕೆಲ ದಿನಗಳ ಬಳಿಕ ಧುತ್ತನೇ ಚೇತು ಮುಂದೆ ನಿಂತಿದ್ದ. ನನ್ನ ಕೊಲೆಗೆ ಯತ್ನಿಸಿದವ ನನ್ನು ಯಾವ ಕಾರಣಕ್ಕೂ ಬಿಡುವುದಿಲ್ಲವೆಂದು ಚೇತುನ ಮನೆಗೆ ನುಗ್ಗಿ ಹೊಡೆದಿದ್ದ. ಹೀಗೆ ಒಬ್ಬರಿಗೊಬ್ಬರು ಪೈಪೋಟಿಗೆ ಬಿದ್ದಂತೆ ಅಪರಾಧ ಕೃತ್ಯಗಳನ್ನು ತಮ್ಮ ಪುಟಗಳನ್ನು ಬರೆಯುತ್ತಾ ಹೋದರು.

ಗೂಂಡಾ ಕಾಯ್ದೆಯಡಿ ಕಲಬುರಗಿ ಜೈಲು ಸೇರಿದ್ದ ಚೇತುಗೆ ಎರಡು ವರ್ಷ ಜಾಮೀನು ಅಸಾಧ್ಯ ವಾಗಿತ್ತು. ಈ ಸಂದರ್ಭದಲ್ಲೇ ಆತ ಒಳಗಿದ್ದುಕೊಂಡೆ ಮಾಸ್ತಿಯನ್ನು ಕೊಲೆ ಮಾಡಿಸುವಲ್ಲಿ ಯಶಸ್ವಿಯಾಗಿದ್ದ.

**ಜಾಮೀನು ಮಂಜೂರು**

ಸೆಷನ್ಸ್ ನ್ಯಾಯಾಲಯದ ಜೀವಾವಧಿ ಶಿಕ್ಷೆ ಪ್ರಶ್ನಿಸಿ ಚೇತು, ತನ್ನ ವಕೀಲರ ಮೂಲಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದ. ಅದನ್ನು ಮಾನ್ಯ ಮಾಡಿದ ನ್ಯಾಯಪೀಠ, ಜೀವಾವಧಿ ಶಿಕ್ಷೆಯನ್ನು ಅಮಾನತ್ತಿನಲ್ಲಿಟ್ಟು ಜಾಮೀನು ನೀಡಿತ್ತು. ಹೈಕೋರ್ಟ್ ಆದೇಶದ ವಿರುದ್ಧ ಚನ್ನರಾಯಪಟ್ಟಣ

» ಮೂರನೇ ಪುಟದಲ್ಲಿ

## ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ಶವ : ಕೊಲೆ ಶಂಕೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ :** ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ಶವವೊಂದು ಪತ್ತೆಯಾಗಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ತಾಲ್ಲೂಕಿನ ಶ್ರವಣಬೆಳಗೊಳದ ಹೊರವಲಯದ ಜಿನ್ನಾಥಪುರ ರಸ್ತೆಯಲ್ಲಿರುವ ಸ್ಮಶಾನದಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಅಪರಿಚಿತ ಶವ ಪತ್ತೆಯಾಗಿದೆ. ದುಷ್ಕರ್ಮಿಗಳು ವ್ಯಕ್ತಿಯನ್ನು ಕೊಲೆ ಮಾಡಿ ಬೆಂಕಿ ಹಚ್ಚಿ ಸುಡಲು ಯತ್ನಿಸಿದ್ದು, ದೇಹವು ಸಂಪೂರ್ಣ ಸುಡದಿದ್ದಾಗ ಉಳಿದ ಅಸ್ಥಿಯನ್ನು ಚೀಲದಲ್ಲಿ ತುಂಬಿಕೊಂಡು ಇಲ್ಲಿಯ ಸ್ಮಶಾನಕ್ಕೆ ತಂದು ಎಸೆಯಲಾಗಿದೆ ಎನ್ನಲಾಗಿದೆ. ಗುರುವಾರ ಬೆಳಿಗ್ಗೆ ದನ ಮೇಯಿಸಲು ಬಂದ ವ್ಯಕ್ತಿ ಸುಟ್ಟು ಕರಕಲಾದ ಮೃತದೇಹವನ್ನು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತ, ಅಪರ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಸರ್ಕಲ್ ಇನ್‌ಸ್ಪೆಕ್ಟರ್ ಸಂತೋಷ್ ಪರಿಶೀಲಿಸಿದರು. ಶ್ರವಣಬೆಳಗೊಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿಸಲಾಗಿದೆ.

## ಸಕಲೇಶಪುರದಲ್ಲಿ ಕಸ ವಿಲೇವಾರಿ ಜಟಾಪಟಿ

- ವಾರದಿಂದ ಗಬ್ಬೆದ್ದು ನಾರುತ್ತಿದೆ ಪಟ್ಟಣ | ಕಸ ಸುರಿಯಲು ಸ್ಥಳೀಯರ ವಿರೋಧ
- ಪುರಸಭೆ ಹಿಂಭಾಗದಲ್ಲಿಯೇ ನಿಂತಿವೆ ತ್ಯಾಜ್ಯ ಸಂಗ್ರಹಿಸಿದ ವಾಹನ

• ಪ್ರಜೋದಯ ವರದಿ

**ಸಕಲೇಶಪುರ :** ಒಂದು ವಾರದಿಂದ ಕಸ ವಿಲೇವಾರಿಯಾಗದೆ ಇಡೀ ಪಟ್ಟಣವೇ ಗಬ್ಬೆದ್ದು ನಾರುತ್ತಿದೆ. ತ್ಯಾಜ ವಿಲೇವಾರಿ ಮಾಡಲು ಸ್ಥಳೀಯರು ಅಡ್ಡಿಪಡಿಸಿದ ಪರಿಣಾಮ ಕಸ ಸಂಗ್ರಹಿಸಿದ ವಾಹನಗಳು ಪುರಸಭೆ ಹಿಂಭಾಗದಲ್ಲಿಯೇ ನಿಂತಿವೆ.

ನೂತನ ತ್ಯಾಜ್ಯ ವಿಲೇವಾರಿ ಘಟನೆ ಉದ್ಘಾಟನೆ ವಿಚಾರದಲ್ಲಿ ಪುರಸಭೆ ಹಾಗು ಸ್ಥಳೀಯ ಶಾಸಕ ಸಿಮೆಂಟ್‌ಮಂಜು ನಡುವೆ ಜಟಾಪಟಿ ನಡೆಯುತ್ತಿದ್ದು, ಪಟ್ಟಣದ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ.

ಪಟ್ಟಣದ 23 ವಾರ್ಡ್‌ಗಳಿಂದ ಪ್ರತಿನಿತ್ಯ 8 ರಿಂದ 10 ಟನ್ ಕಸ ಸಂಗ್ರಹವಾಗುತ್ತದೆ. ಈ ಕಸವನ್ನು ಕಳೆದ ಎರಡು ವರ್ಷಗಳಿಂದ ಪಟ್ಟಣದ ತಾಲ್ಲೂಕು ಕ್ರೀಡಾಂಗಣ (ಸುಭಾಷ್ ಮೈದಾನ) ಪಕ್ಕದ ಪುರಸಭೆಗೆ ಸೇರಿದ ಜಾಗದಲ್ಲಿ ವಿಲೇವಾರಿ ಮಾಡಲಾಗುತ್ತಿತ್ತು. ಇದರಿಂದ ಬರುತ್ತಿರುವ ದುರ್ವಾಸನೆಯಿಂದ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಸುತ್ತಮುತ್ತಲಿನ ಪ್ರದೇಶದ ನಿವಾಸಿಗಳು ಹಾಗು ವ್ಯಾಪಾರಸ್ಥರಿಗೆ



ಸಮಸ್ಯೆ ಎದುರಾಗಿದೆ. ಸೊಳ್ಳೆಗಳ ಕಾಟ ಹೆಚ್ಚಾಗಿ ಇಲ್ಲಿನ ಜನರು ರೋಗಪೀಡಿತರಾಗುತ್ತಿದ್ದಾರೆ. ಈ ಕಾರಣಕ್ಕೆ ಕಸ ವಿಲೇವಾರಿ ಮಾಡದಂತೆ ಪುರಸಭೆ ವಿರುದ್ಧ ತಿರುಗಿ ಬಿದ್ದಿದ್ದು, ಹಗಲು-ಇರುಳು ಕಸ ವಿಲೇವಾರಿ ಮಾಡಲು ಬರುತ್ತಿರುವ ಪುರಸಭೆ ವಾಹನಗಳನ್ನು ವಾಪಾಸ್ ಕಳುಹಿಸಲಾಗುತ್ತಿದೆ. ಒಂದು ವಾರದಿಂದ ಸಕಲೇಶಪುರ ಪಟ್ಟಣದಲ್ಲಿ ಎಲ್ಲಿ ನೋಡಿದರಲ್ಲಿ ಕಸದ ರಾಶಿ ಬಿದ್ದಿದೆ.

ತಾಲ್ಲೂಕಿನ ಮಳಲಿ ಗ್ರಾಮದ ಬಳಿ ನೂತನ ತ್ಯಾಜ್ಯ ವಿಲೇವಾರಿ ಘಟಕವನ್ನು ನಿರ್ಮಿಸಲಾಗಿದೆ. ಈ ಹಿಂದೆ ಸ್ಥಳೀಯರು ನ್ಯಾಯಾಲಯದ ಮೆಟ್ಟಿಲೇರಿದ್ದರಿಂದ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡುವಂತೆ ಕೋರ್ಟ್ ಸೂಚನೆ ನೀಡಿತ್ತು. ಪುರಸಭೆ ವತಿಯಿಂದ ಕೋಟ್ಯಾಂತರ ರೂ. ಖರ್ಚು ಮಾಡಿ ಮಳಲಿ ಗ್ರಾಮದ ಬಳಿ ನೆಲಭರ್ತಿ ನಿರ್ಮಾಣ ಮಾಡಿ ನೂತನ ಯಂತ್ರಗಳನ್ನು ಅಳವಡಿಸಲಾಗಿದ್ದು, ಉದ್ಘಾಟನೆಗೆ ಸಿದ್ಧಗೊಂಡಿದೆ. ಆದರೆ, ಪುರಸಭೆಯಲ್ಲಿ ಜೆಡಿಎಸ್ ಆಡಳಿತದಲ್ಲಿರುವ ಕಾರಣ ಬಿಜೆಪಿ ಶಾಸಕ ಸಿಮೆಂಟ್ ಮಂಜು ಉದ್ಘಾಟನೆ ಮಾಡಲು ಹಿಂದೇಟು ಹಾಕುತ್ತಿದ್ದಾರೆಂಬ ಗಂಭೀರ ಆರೋಪ ಕೇಳಿ ಬಂದಿದೆ. ಉದ್ಘಾಟನೆ ವಿಳಂಬವಾಗುತ್ತಿರುವ ಕಾರಣ ಕಸ ಸಮಸ್ಯೆ ತಾರಕಕ್ಕೇರಿದ್ದು, ಪುರಸಭೆ ಹಾಗು ಶಾಸಕರ ವಿರುದ್ಧ ಜನರು ಅಸಮಾಧಾನ ವ್ಯಕ್ತ ಪಡಿಸುತ್ತಿದ್ದಾರೆ. ಸಮಸ್ಯೆ ಬಿಗಡಾಯಿಸುವ ಮುನ್ನ ಕ್ರಮ ಕೈಗೊಳ್ಳುವಂತೆ ನಿವಾಸಿಗಳು ಒತ್ತಾಯಿಸಿದ್ದಾರೆ.

**ಪುರಸಭೆಯವರು ವಾಸ್ತವಾಂಶವನ್ನು ಮರೆಮಾಚಿ ಮಳಲಿ ಗ್ರಾಮದ ಬಳಿ ಪಟ್ಟಣದಲ್ಲಿ ಸಂಗ್ರಹವಾಗುವ ಕಸವನ್ನು ವಿಲೇವಾರಿ ಮಾಡಲು ಯೋಜನೆ ರೂಪಿಸಿರುವುದರಿಂದ ಗ್ರಾಮಸ್ಥರು ಸಮಸ್ಯೆ ಅನುಭವಿಸುವಂತಾಗಿದೆ. ಗ್ರಾಮದಲ್ಲಿ 150 ರಿಂದ 200 ಮನೆಗಳಿದ್ದು, ಇಲ್ಲಿನ ನಿವಾಸಿಗಳ ಆರೋಗ್ಯದ ಬಗ್ಗೆಯೂ ಗಮನ ಹರಿಸುವುದು ಅವಶ್ಯಕವಾಗಿದೆ.**

**-ಶಿವಣ್ಣ, ಗ್ರಾಮಸ್ಥ**

## ಪಿಡಿಓ-ಇಓ ಅಮಾನತುಗೊಳಿಸದಿದ್ದರೆ ಪಾದಯಾತ್ರೆ

### ನೈತಿಕ ಹೊಣೆ ಹೊತ್ತು ಶಿವಲಿಂಗೇಗೌಡ ರಾಜೀನಾಮೆ ನೀಡಲಿ : ಎನ್.ಆರ್.ಸಂತೋಷ್

• ಪ್ರಜೋದಯ ವರದಿ

**ಹಾಸನ:** ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ಮನೆ ಹಂಚಿಕೆಯಲ್ಲಿ ಅವ್ಯವಹಾರ ನಡೆಸಿರುವ ಪಿಡಿಓ ಹಾಗು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಲು ಒತ್ತಾಯಿಸಿ ಅರಸೀಕೆರೆ ತಾಲ್ಲೂಕು ಪಂಚಾಯಿತಿ ಎದುರು ಧರಣಿ ನಡೆಸಲಾಗುವುದು. ಕ್ರಮ ಕೈಗೊಳ್ಳದಿದ್ದರೆ ಅರಸೀಕೆರೆಯಿಂದ ಹಾಸನದವರೆಗೆ ಪಾದಯಾತ್ರೆ ನಡೆಸಲಾಗುವುದೆಂದು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಅವರು ಎಚ್ಚರಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ




ಮಾತನಾಡಿದ ಅವರು, ಕೇಂದ್ರ ವಸತಿ ಯೋಜನೆಯಡಿ 90 ಮಂದಿ ಫಲಾನುಭವಿಗಳಿಗೆ ಹಣ ಬಿಡುಗಡೆಯಲ್ಲಿ ಬೋಗಸ್ ನಡೆಸಿರುವ ಅಧಿಕಾರಿಗಳನ್ನು ಗೃಹಮಂಡಳಿ ಅಧ್ಯಕ್ಷ ಕೆ.ಎ. ಶಿವಲಿಂಗೇಗೌಡ ಅವರು ನಿಯೋಜನೆ ಮಾಡಿದ್ದಾರೆ. ಹೀಗಾಗಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಅರಸೀಕೆರೆ ವಿಧಾನಸಭಾ ಕ್ಷೇತ್ರದ ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ಪಿಎಂಎವೈ ಯೋಜನೆಯಡಿ ಮನೆ ಹಂಚಿಕೆಯಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಸ್ವತಃ ಶಾಸಕರೇ ಒಪ್ಪಿಕೊಂಡಿದ್ದಾರೆ. ರಾಜ್ಯದಲ್ಲಿ ಅವರದೇ ಸರ್ಕಾರ ಇದ್ದು, ಶೀಘ್ರ ತನಿಖೆ ನಡೆಸಿ ತಪ್ಪಿತಸ್ಥರ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಪಿಡಿಓ ಎನ್.ಕುಮಾರಸ್ವಾಮಿ ಎಂಬುವವರು ಹಬ್ಬನಘಟ್ಟ ಪಂಚಾಯಿತಿಯಲ್ಲಿದ್ದಾಗ ಕರ್ತವ್ಯ ಲೋಪ ಆರೋಪದಡಿ ಅಮಾನತುಗೊಂಡಿದ್ದರು. ನಂತರ ಅವರನ್ನೇ ಇದೇ ಶಿವಲಿಂಗೇಗೌಡ ಅವರು ತಾವೇ ಮೌಖಿಕ ಶಿಫಾರಸ್ಸು ಮಾಡಿ ಬಾಣಾವರ ಗ್ರಾಮ ಪಂಚಾಯಿತಿ ಪಿಡಿಓ ಮಾಡಿದ್ದರು. ಇಷ್ಟೆಲ್ಲಾ ಭ್ರಷ್ಟಾಚಾರಕ್ಕೆ ಕುಮಾರಸ್ವಾಮಿಯೇ ಕಾರಣವಾಗಿದ್ದು, ಇವರ ನೇಮಕಕ್ಕೆ ಶಾಸಕ ಶಿವಲಿಂಗೇಗೌಡ ಅವರ ಮೌಖಿಕ

» ನಾಲ್ಕನೇ ಪುಟದಲ್ಲಿ

## ಇಂದು ಶೈಕ್ಷಣಿಕ ಕಾರ್ಯಾಗಾರ

• ಪ್ರಜೋದಯ ವರದಿ

**ಹಾಸನ:** ನಗರದ ಎವಿಕೆ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಶೈಕ್ಷಣಿಕ ಕಾರ್ಯಾಗಾರ, ಪ್ರತಿಭಾ ಪುರಸ್ಕಾರ, ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ವಿವೇಕಾನಂದ ಉದ್ಘಾಟಿಸುವರು. ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪಿ. ಗಂಗಾಧರ್ ಅಧ್ಯಕ್ಷತೆ ವಹಿಸುವರು. ಸರ್ಕಾರಿ ಕಲಾ ಕಾಲೇಜಿನ ಅರ್ಥಶಾಸ್ತ್ರ ಸಹ ಪ್ರಾಧ್ಯಾಪಕ ಡಾ.ಮುರುಳಿಧರ್, ಅರ್ಥಶಾಸ್ತ್ರ ಉಪನ್ಯಾಸಕ ಬಿ.ಜೆ. ಧರ್ಮೇಂದ್ರ ಅವರು ಟ್ರಂಪ್ ತೆರಿಗೆಯ ಸಾಧಕ ಮತ್ತು ಪರಿಣಾಮದ ಕುರಿತು ಉಪನ್ಯಾಸ ನೀಡುವರು.

## ಕಪಾಳಕ್ಕೆ ಹೊಡೆದನೆಂಬ ಕಾರಣಕ್ಕೆ ಸ್ನೇಹಿತನ ಹತ್ಯೆ

### ಗೌರಿ-ಗಣೇಶ ಹಬ್ಬದ ದಿನವೇ ಘಟನೆ | ಬಾಲಾಪರಾಧಿಗಳಿಂದ ಕೃತ್ಯ

• ಪ್ರಜೋದಯ ವರದಿ

**ಹಾಸನ:** ಸ್ನೇಹಿತನ ಮೊಬೈಲ್ ಕಸಿದು ಅಡಮಾನ ಇಟ್ಟಿದ್ದಕ್ಕೆ ಹೊಡೆದನೆಂಬ ಕಾರಣಕ್ಕೆ ಸ್ನೇಹಿತನನ್ನೇ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಯರೇಹಳ್ಳಿ ಹಳ್ಳದ ಸಮೀಪ ಆ.26ರ ಮಂಗಳವಾರ ರಾತ್ರಿ ನಡೆದಿದೆ.

ದೇವರಾಯಪಟ್ಟಣದ ಚಂದ್ರು ಅವರ ಪುತ್ರ ಸಿ.ಅಂಕಿತ್ (21) ಮೃತ ದುರ್ದೈವಿ. ಕೊಲೆ ಮಾಡಿದ ಇಬ್ಬರೂ ಬಾಲಾಪರಾಧಿಗಳಾಗಿದ್ದು, ಕೊಲೆಗೆ ಮೂವರು ಸಹಕಾರ ನೀಡಿದ್ದಾರೆ ಎನ್ನಲಾಗಿದೆ. ಪ್ರಕರಣ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದರು. ಒಟ್ಟು ಐವರನ್ನು ಬಂಧಿಸಿದ್ದಾರೆಂದು ತಿಳಿದು ಬಂದಿದೆ.

**ಸ್ನೇಹಿತನ ಮೊಬೈಲ್ ಪಡೆದಿದ್ದರು**

ವಾರ್ಡ್‌ರೂಬ್ ಸಹಾಯಕನಾಗಿ ಕೆಲಸ ಮಾಡಿಕೊಂಡಿದ್ದ ಅಂಕಿತ್ ಗಣೇಶೋತ್ಸವ ಹಿನ್ನಲೆಯಲ್ಲಿ ಕಳೆದ ನಾಲ್ಕು ದಿನಗಳಿಂದ ಕೆಲಸಕ್ಕೆ ರಜೆ ಹಾಕಿ ಮನೆಯಲ್ಲೇ ಇದ್ದ. ಮೃತ ಅಂಕಿತ್‌ನ ಸ್ನೇಹಿತ ಹರ್ಷ ಎಂಬಾತನ ಮೊಬೈಲ್‌ನ್ನು ಇಬ್ಬರು ಸ್ನೇಹಿತರು ಬಲವಂತವಾಗಿ ಕಸಿದು ಕೊಂಡು ಅಡಮಾನ ಇಟ್ಟಿದ್ದರು. ಅದನ್ನು ಆತ ದುಡ್ಡು ಕೊಟ್ಟು ವಾಪಾಸ್ ಪಡೆದಿದ್ದ. ಈ ವಿಚಾರ ಅಂಕಿತ್‌ಗೆ ಗೊತ್ತಾಗಿ




ಮಂಗಳವಾರ ಮಧ್ಯಾಹ್ನ ತಣ್ಣೀರು ಹಳ್ಳದ ಬಾರ್‌ವೊಂದರ ಮುಂದೆ ಮೊಬೈಲ್ ಕಸಿದುಕೊಂಡಿದ್ದ ಒಬ್ಬಾತನಿಗೆ ಅಂಕಿತ್ ಹೊಡೆದಿದ್ದ ಎನ್ನಲಾಗಿದೆ.

ಆಗ ಅಂಕಿತ್‌ನ ತಂದೆ ಚಂದ್ರು ಹಾಗು ಮೊದಲ ಮಗ ಆಕಾಶ್ ತಮ್ಮ ಮಗನಿಗೆ ಬುದ್ಧಿ ಹೇಳಿ ಎಲ್ಲರನ್ನೂ ಸಮಾಧಾನ ಮಾಡಿ ಮನೆಗೆ ಕರೆದು ಕೊಂಡು ಹೋಗಿದ್ದರು. ಸಂಜೆ ಸ್ನೇಹಿತರು ನಿರಂತರವಾಗಿ ಕರೆ ಮಾಡುತ್ತಿದ್ದುದರಿಂದ ಗುಡ್ಡೇನಹಳ್ಳಿಯಲ್ಲಿ ಗಣಪತಿ

» ಮೂರನೇ ಪುಟದಲ್ಲಿ

## ಡಿಜಿಟಲ್ ಅರೆಸ್ಟ್: ಬೇಲೂರು ರೈತನ ಬಂಧನ

• ಪ್ರಜೋದಯ ವರದಿ

**ದಾವಣಗೆರೆ:** ಮಾದಕ ದ್ರವ್ಯ ಸಾಗಾಟದ ಸುಳ್ಳು ಆರೋಪದಡಿ ಶಿಕ್ಷಕಿಯೊಬ್ಬರನ್ನು ಡಿಜಿಟಲ್ ಅರೆಸ್ಟ್ ಮಾಡಿ 22.40 ಲಕ್ಷ ರೂ. ಸುಲಿಗೆ ಮಾಡಿದ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಯುವ ರೈತನೊಬ್ಬನನ್ನು ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊರಟಿಕೆರೆ ಗ್ರಾಮದ ಅರುಣ್ ಕುಮಾರ್ (35) ಬಂಧಿತ ಆರೋಪಿ. ಬಂಧಿತನನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ 1.90 ಲಕ್ಷ ರೂ. ಇರುವ ಬ್ಯಾಂಕ್ ಖಾತೆಯನ್ನು ಫ್ರೀಜ್ ಮಾಡಿದ್ದಾರೆ. ಇನ್ನೂ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಫೆ.5ರಂದು ಶಿಕ್ಷಕಿಗೆ ದೂರವಾಣಿ ಕರೆ ಮಾಡಿದ ಆರೋಪಿಗಳು ಮುಂಬೈ ಬ್ಲೂಡಾಟ್ ಕೋರಿಯರ್ ಹೆಸರಿನಲ್ಲಿ ಪರಿಚಯಿಸಿಕೊಂಡಿದ್ದರು. ದುಬೈಗೆ ಕಳುಹಿಸುತ್ತಿರುವ ಪಾರ್ಸಲ್‌ನಲ್ಲಿ ಔಷಧಗಳ ಜೊತೆಗೆ ಮಾದಕ ವಸ್ತು ಪತ್ತೆಯಾಗಿದ್ದು, ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವುದಾಗಿ ಬೆದರಿಸಿದ್ದರು. ಆಧಾರ್ ಕಾರ್ಡ್ ಹಾಗು ಇ-ಮೇಲ್ ವಿಳಾಸ ಪಡೆದುಕೊಂಡಿದ್ದರೆಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಾಟ್ಸ್ ಆಪ್ ಕಾಲ್ ಮಾಡಿದ ಮಹಿಳೆಯೊಬ್ಬರು ತನ್ನನ್ನು ಡಿಸಿಪಿ ಎಂದು ಪರಿಚಯಿಸಿಕೊಂಡು ಶಿಕ್ಷಕಿಯನ್ನು ಡಿಜಿಟಲ್ ಅರೆಸ್ಟ್ ಮಾಡಿದ್ದಾರೆ. ಹವಾಲಾ ಹಣ ವರ್ಗಾವಣೆಯಲ್ಲಿ ಬಂಧಿತನಾಗಿರುವ ಆರೋಪಿಯ ಬಳಿ ಶಿಕ್ಷಕಿಯ ಬ್ಯಾಂಕ್ ಖಾತೆಯ ವಿವರ ಹಾಗು ಎಟಿಎಂ ಕಾರ್ಡ್ ಪತ್ತೆಯಾಗಿರುವುದಾಗಿ ಬೆದರಿಸಿದ್ದಾರೆ. ಬ್ಯಾಂಕ್ ಖಾತೆಯ ಕಾನೂನಾತ್ಮಕ ತೊಡಕುಗಳನ್ನು ನಿವಾರಿಸಲು 22.40 ಲಕ್ಷ ರೂ.ಗಳನ್ನು ಎರಡು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾರೆಂದು ಪೊಲೀಸರು ವಿವರಿಸಿದ್ದಾರೆ.

ಈ ಸಂಬಂಧ ಮಾರ್ಚ್ 12ರಂದು ಶಿಕ್ಷಕಿ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ತನಿಖೆ ನಡೆಸಿದ ಡಿವೈಎಸ್‌ಪಿ ಬಂಕಾಳಿ ನಾಗಪ್ಪ ನೇತೃತ್ವದ ಪೊಲೀಸರು ಒಬ್ಬ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

### ಯುವಕರಿಂದ ಈಜಾಟ, ಸ್ಥಳದಲ್ಲಿ ಅನೈತಿಕ ಚಟುವಟಿಕೆ | ಕಡಿವಾಣ ಹಾಕಲು ಸ್ಥಳೀಯರ ಒತ್ತಾಯ

## ಈಜು ಕೊಳವಾಗುತ್ತಿವೆ ಎತ್ತಿನಹೊಳೆ ನೀರು ವಿತರಣಾ ತೊಟ್ಟಿ

• ಪ್ರಜೋದಯ ವರದಿ

ಹಾಸನ: ಬಯಲುಸೀಮೆಯ ಜಿಲ್ಲೆಗಳಿಗೆ ಮಲೆನಾಡಿನಿಂದ ನೀರು ಪೂರೈಕೆ ಮಾಡುವ ಎತ್ತಿನಹೊಳೆ ಯೋಜನೆಯ ನೀರು ವಿತರಣಾ ತೊಟ್ಟಿಗಳು ಈಜು ಕೊಳ, ಮೋಜು ಮಸ್ತಿಯ ಅಡ್ಡೆಯಾಗಿ ಪರಿವರ್ತನೆಗೊಳ್ಳುತ್ತಿವೆ.

ಹಲವು ಕಡೆಗಳಲ್ಲಿರುವ ನೀರು ಸಂಗ್ರಹಣಾ ಮತ್ತು ವಿತರಣಾ ತೊಟ್ಟಿ, ಚೆಕ್ ಡ್ಯಾಮ್‌ಗಳ ಸುತ್ತ ಸುರಕ್ಷತೆಗೆ ತಡೆ ಬೇಲಿಯನ್ನು ಹಾಕದೇ ಇರುವುದರಿಂದ ಸ್ಥಳೀಯ ಯುವಕರು ಹಾಗು ಪ್ರವಾಸಿಗರು ಈಜಲು ಕಾಲುವೆ, ಚೆಕ್ ಡ್ಯಾಮ್‌ಗಳಿಗೆ ಇಳಿಯುತ್ತಿರುವುದರಿಂದ ಅಪಾಯವನ್ನು ಮೈಮೇಲೆ ಎಳೆದು ಕೊಳ್ಳುತ್ತಿದ್ದಾರೆ. ಈಗಾಗಲೇ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸಾವು-ನೋವು ಸಂಭವಿಸುವ ಸಾಧ್ಯತೆ ಇದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

ಸಕಲೇಶಪುರ ತಾಲ್ಲೂಕಿನ ಕಾಡುಮನೆ ಸಮೀಪವಿರುವ ಎತ್ತಿನಹೊಳೆ ಯೋಜನೆಯ ಡಿ-2 ಗೇಟ್ ಬಳಿ ಅಸುರಕ್ಷಿತ ಪರಿಸ್ಥಿತಿ ನಿರ್ಮಾಣವಾಗಿದೆ. ಕಾಡುಮನೆ ಟೀ ಎಸ್ಟೇಟ್ ವೀಕ್ಷಣೆಗೆ ಬರುವ ಪ್ರವಾಸಿಗರು ಈ ಸ್ಥಳಕ್ಕೂ ಭೇಟಿ ನೀಡುತ್ತಿರುವುದರಿಂದ ಸಮಸ್ಯೆ ದೊಡ್ಡದಾಗಲು ಕಾರಣವಾಗಿದೆ. ಈ ಸ್ಥಳದಲ್ಲಿ ನೀರು ಜೋರಾಗಿ ಹರಿಯುತ್ತಿರುವುದರಿಂದ ಪ್ರತಿದಿನ ಪ್ರವಾಸಿಗರು ಹಾಗು ಸ್ಥಳೀಯ ಯುವಕರು ಈಜಲು ಬರುತ್ತಿದ್ದು, ಯಾವುದೇ ಸಮಯದಲ್ಲಿ ಪ್ರಾಣಾಪಾಯ ಸಂಭವಿಸುವ ಭೀತಿ ಎದುರಾಗಿದೆ.



ಮಳೆಗಾಲದಲ್ಲಿ ಹರಿಯುವ ನೀರನ್ನು ಚೆಕ್ ಡ್ಯಾಮ್‌ಗಳಲ್ಲಿ ಸಂಗ್ರಹಿಸಿ, ವಿತರಣಾ ನಾಲೆಗಳಿಂದ ಬಯಲು ಸೀಮೆಗೆ ಹರಿಸಬೇಕಿದೆ. ಆದರೆ, ನಾಲೆ ನಿರ್ಮಾಣ ಕಾರ್ಯಕ್ಕೆ ಅರಣ್ಯ ಇಲಾಖೆ ಅಡ್ಡಿಪಡಿಸಿರುವುದರಿಂದ ನೀರನ್ನು ಹರಿಸಲಾಗದೆ ಸಂಗ್ರಹಿಸಿ ಕೊಂಡಿರುವುದರಿಂದ ಸಮಸ್ಯೆ ಉದ್ಭವವಾಗಿದೆ.

ಈ ಸ್ಥಳದಲ್ಲಿ ಕಾವಲುಗಾರರಾಗಲಿ, ನಿಯಂತ್ರಣ ಕಂಬಿ, ಎಚ್ಚರಿಕೆ ಫಲಕಗಳನ್ನು ಹಾಕದಿರುವುದರಿಂದ ನೀರಿನ ಮಟ್ಟ ಏರಿದಾಗ ಅಪಾಯದ ಸಾಧ್ಯತೆ ಹೆಚ್ಚುತ್ತಿದೆ. ಕಾಮಗಾರಿ ನಡೆಸಿರುವ ಸ್ಥಳಗಳಲ್ಲಿ ಸುರಕ್ಷತೆಗೆ ಒತ್ತು ನೀಡದೆ ಜನರಿಗೆ ಅಪಾಯ ತಂದೊಡ್ಡಿದೆ.

**ಅನೈತಿಕ ಚಟುವಟಿಕೆಗಳ ತಾಣ**

ಈ ಸ್ಥಳಗಳಲ್ಲಿ ಯಾರೊಬ್ಬರು ಸರಿಯಾಗಿ ನಿರ್ವಹಣೆ ವಹಿಸದಿರುವುದರಿಂದ ಪುಂಡ-ಪೋಕರಿಗಳು ತಮ್ಮ ಅಡ್ಡೆಯಾಗಿ ಪರಿವರ್ತಿಸಿಕೊಂಡಿದ್ದಾರೆ. ನಿರ್ವಹಣೆ ಇಲ್ಲದ ಮದ್ಯಪಾನ, ಮಾದಕ ವಸ್ತುಗಳ ಸೇವನೆ, ವಾಹನ ಸವಾರರ ಅಸಭ್ಯ ವರ್ತನೆ ಸಾಮಾನ್ಯವಾಗಿದೆ. ಪ್ರವಾಸಿಗರು ಮುಜುಗರಕ್ಕೆ ಒಳಗಾಗುತ್ತಿದ್ದು, ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ಲಾಸ್ಟಿಕ್, ಮದ್ಯದ ಬಾಟಲ್, ಆಹಾರದ ತ್ಯಾಜ್ಯವು ನೈಸರ್ಗಿಕ ಮಲೆನಾಡಿನ ಪರಿಸರಕ್ಕೆ ಧಕ್ಕೆಯುಂಟು ಮಾಡುತ್ತಿದೆ. ಎತ್ತಿನಹೊಳೆ ಯೋಜನೆ ಅಂಚಿನ ಅರಣ್ಯ ಪ್ರದೇಶವು ಪಶ್ಚಿಮಘಟ್ಟ ಜೀವವೈವಿಧ್ಯತಾ ತಾಣವಾಗಿರುವುದರಿಂದ ಪರಿಸರಕ್ಕೆ ಮಾರಕ ವಾಗಿದೆ ಎಂದು ಪರಿಸರ ಪ್ರೇಮಿಗಳು ದೂರಿದ್ದಾರೆ.

**ಜನರ ಓಡಾಟ ನಿಷೇಧಿಸಬೇಕು**

ಕುಡಿಯುವ ನೀರನ್ನು ಕಲುಷಿತಗೊಳಿತಗೊಳಿಸುವುದನ್ನು ತಪ್ಪಿಸಲು ಪೊಲೀಸರು ಹಾಗು ಎತ್ತಿನಹೊಳೆ ಯೋಜನೆ ನಿರ್ವಹಣಾ ಅಧಿಕಾರಿಗಳು ನಿಯಮಿತ ಪೆಟ್ರೋಲಿಂಗ್ ನಡೆಸಿ, ಸಿಸಿಟಿವಿ ಕ್ಯಾಮೆರಾ ಅಳವಡಿಸಿ, ಪ್ರವಾಸಿಗರಿಗೆ ನಿರ್ದಿಷ್ಟ ಸ್ಥಳಗಳನ್ನು ನಿಗದಿಪಡಿಸಬೇಕು. ಈ ಭಾಗದಲ್ಲಿ ಜನರ ಓಡಾಟವನ್ನು ನಿಷೇಧಿಸಬೇಕು. ಕಡ್ಡಾಯವಾಗಿ ಸೂಚನಾ ಫಲಕ, ಕಾವಲುಗಾರರನ್ನು ನೇಮಕ ಮಾಡಲು ಸಂಬಂಧಪಟ್ಟ ಅಧಿಕಾರಿಗಳು, ಇಲಾಖೆ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ನೀರು ಕಲುಷಿತಗೊಳಿಸುವುದು ಮಾತ್ರವಲ್ಲದೇ ಪ್ರಾಣಕ್ಕೂ ಹಾನಿ ಉಂಟಾಗಲಿದೆ. ಕಾಲುವೆ, ಚೆಕ್ ಡ್ಯಾಮ್‌ಗಳಲ್ಲಿ ಈಜಾಡುವುದನ್ನು ನಿಷೇಧಿಸಬೇಕು. ಅನಾವಶ್ಯಕವಾಗಿ ಈ ಭಾಗದಲ್ಲಿ ಜನರು ಓಡಾಡುವುದನ್ನು ತಡೆಕಟ್ಟಲು ಕಟ್ಟನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ತಕ್ಷಣ ಕಾವಲುಗಾರರನ್ನು ನೇಮಿಸಿ, ಎಚ್ಚರಿಕೆ ಫಲಕಗಳನ್ನು ಅಳವಡಿಸಿ, ಅನೈತಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ದೊಡ್ಡ ದುರಂತ ಸಂಭವಿಸಿದ ನಂತರ ಮಾತ್ರ ಆಡಳಿತ ಎಚ್ಚರಗೊಳ್ಳುವ ಸ್ಥಿತಿ ಉಂಟಾಗಬಾರದು.
-ಮಂಜುದೇವ್ ಹುಲ್ಲಹಳ್ಳಿ, ತಾಲ್ಲೂಕು ಅಧ್ಯಕ್ಷ ಮಲೆನಾಡು ರಕ್ಷಣಾ ಸೇನೆ, ಸಕಲೇಶಪುರ.

E-mail : prajodayahsn@gmail.com

ಪ್ರಜೋದಯ

29 ಆಗಸ್ಟ್ 2025 ಶುಕ್ರವಾರ

# ಸಿನಿ ಪ್ರಜಾ


# ಆ.29ಕ್ಕೆ ಅಂದೊಂದಿತ್ತು ಕಾಲ

## ಪ್ರಯಾಣದ ನಿಜ ಜೀವನದ ಅನುಭವಗಳನ್ನು ಪ್ರತಿಬಿಂಬಿಸುತ್ತದೆ




ಆಗಸ್ಟ್ 29 ರಂದು ಗೌರಿ-ಗಣೇಶ ಹಬ್ಬದೊಂದಿಗೆ ಸೂಕ್ತ ಸಮಯಕ್ಕೆ ಸರಿಯಾಗಿ, ಈ ವಾರ ಅಂದೊಂದಿತ್ತು ಕಾಲ ಚಿತ್ರ ಥಿಯೇಟರ್‌ಗಳಿಗೆ ಬರಲು ಸಜ್ಜಾಗಿದೆ.

ದೀರ್ಘ ಕಾಯುವಿಕೆಯ ನಂತರ, ವಿನಯ್ ರಾಜ್‌ಕುಮಾರ್ ಅವರ ಮುಂದಿನ ಚಿತ್ರ ಅಂದೊಂದಿತ್ತು ಕಾಲ ಈ ವಾರ ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ, ಆಗಸ್ಟ್ 29 ರಂದು ಗೌರಿ-ಗಣೇಶ ಹಬ್ಬಕ್ಕೆ ಇದು ಸೂಕ್ತ ಸಮಯ. ಬೆಸೆಯುತ್ತದೆ.

ವಿನಯ್‌ಗೆ, ಈ ಚಿತ್ರವು ಅವರ ವೃತ್ತಿಜೀವನದ ಅತ್ಯಂತ ಮಹತ್ವದ್ದಾಗಿದೆ. ಈ ಚಿತ್ರ ನನಗೆ ತುಂಬಾ ಹತ್ತಿರವಾಗಿದೆ. ಅಂದೊಂದಿತ್ತು ಕಾಲಾ ಸಿನಿಮಾದಲ್ಲಿ ಕೀರ್ತಿ ಅವರ ಸಿನಿಮಾ ಪ್ರಯಾಣದ ನಿಜ ಜೀವನದ ಅನುಭವಗಳನ್ನು ಪ್ರತಿಬಿಂಬಿಸುತ್ತದೆ. ನನ್ನ ಪಾತ್ರಕ್ಕೆ ಮೂರು ಛಾಯೆಗಳಿವೆ, ಮತ್ತು ಅದನ್ನು ಜೀವಂತಗೊಳಿಸಲು ಮೂರು ವರ್ಷಗಳ ಪ್ರಯತ್ನವಾಗಿದೆ. ನನ್ನ ತಾಯಿಯ ಕರ್ನಾಟಕದಾದ್ಯಂತ ವ್ಯಾಪಕ ಬಿಡುಗಡೆಯನ್ನು ಘೋಷಿಸಿದರು. ನಾವು ಜಗದೀಶ್ ಫಿಲ್ಮ್ಸ್ ಮೂಲಕ 180 ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದ್ದೇವೆ. ಗೌರಿ-ಗಣೇಶ ಹಬ್ಬದ ಹಬ್ಬದಂತೆಯೇ, ಈ ಚಿತ್ರವು ಪ್ರೇಕ್ಷಕರಿಗೆ ಒಂದು ಹಬ್ಬದ


ಕೀರ್ತಿ ಕೃಷ್ಣಪ್ಪ ನಿರ್ದೇಶನದ ಈ ಚಿತ್ರವು ನಿರ್ದೇಶಕರ ಸ್ವಂತ ಜೀವನದ ಪ್ರಸಂಗಗಳಿಂದ ಸ್ಫೂರ್ತಿ ಪಡೆದು, ಪ್ರೀತಿ, ಸ್ನೇಹ ಮತ್ತು ಕುಟುಂಬ ಬಂಧಗಳ ಕಥೆಯಾಗಿ ಅವುಗಳನ್ನು ಪಾತ್ರದಲ್ಲಿರುವ ಅರುಣಾ ಬಾಲರಾಜ್ ಅವರೊಂದಿಗೆ ಮತ್ತೆ ಪರದೆಯ ಜಾಗವನ್ನು ಹಂಚಿಕೊಳ್ಳುವುದು ಇದನ್ನು ಇನ್ನಷ್ಟು ವಿಶೇಷಗೊಳಿಸುತ್ತದೆ ಎಂದು ಅವರು ಹೇಳಿದರು.

ನಟಿ ಅದಿತಿ ಪ್ರಭುದೇವ ಅವರು, ಪಾತ್ರಗಳು ವೀಕ್ಷಕರ ಮನಸ್ಸನ್ನು ಮುಟ್ಟುತ್ತವೆ ಎಂದು ಹೇಳಿದರು. ಈ ಕಥೆಯಲ್ಲಿ ಒಂದು ನಿರ್ದಿಷ್ಟ ಅರ್ಥ ಮತ್ತು ಉಷ್ಣತೆ ಇದೆ, ಅದು ತುಂಬಾ ನೈಜವೆನಿಸುತ್ತದೆ. ಈ ಚಿತ್ರದಲ್ಲಿ ಪ್ರೇಕ್ಷಕರು ಸಂಬಂಧಿಸುವ ಜೀವನಕ್ಕೆ ಹತ್ತಿರವಾದ ಪಾತ್ರಗಳಿವೆ. ಇದು ಎಲ್ಲರೊಂದಿಗೂ ಆಳವಾಗಿ ಸಂಪರ್ಕ ಸಾಧಿಸುತ್ತದೆ ಎಂದು ನಾನು ಭಾವಿಸುತ್ತೇನೆ.

ನಿರ್ಮಾಪಕ ಭುವನ್ ಸುರೇಶ್ ಅನುಭವವಾಗಲಿದೆ. ನಾನು ಕೂಡ ಒಂದು ಸಣ್ಣ ಪಾತ್ರವನ್ನು ಮಾಡಿದ್ದೇನೆ, ಆದರೆ ಇದು ನಿಜವಾಗಿಯೂ ಕೀರ್ತಿ ಅವರ ಚಿತ್ರ.



# ಸುದೀಪ್ ಸೂಪರ್ ಹಿಟ್ ಸಿನಿಮಾ ರೀ-ರಿಲೀಸ್



ನಟ ಕಿಚ್ಚ ಸುದೀಪ್ ಹುಟ್ಟುಹಬ್ಬಕ್ಕೆ ದಿನಗಣನೆ ಶುರುವಾಗಿದೆ. ಈ ಬಾರಿ ಅಭಿಮಾನಿಗಳ ಪ್ರೀತಿಯ ಬಾದ್‌ಶಾ ಹುಟ್ಟುಹಬ್ಬ ಬಹಳ ವಿಶೇಷಗಳಿಂದ ಕೂಡಿರುತ್ತದೆ. 47 ಟೀಸರ್ ಕೂಡ ಬರಲಿದೆ. ಬಿಗ್‌ಬಾಸ್ ಪ್ರೋಮೊ ಬಿಡುಗಡೆ ಆಗುವ ಸಾಧ್ಯತೆಯಿದೆ. ಇದೆಲ್ಲದರ ನಡುವೆ ಸುದೀಪ್ ನಟನೆಯ ಹಳೇ ಸಿನಿಮಾ ರೀ-ರಿಲೀಸ್ ಆಗ್ತಿದೆ.

ಹಳೇ ಹಿಟ್ ಸಿನಿಮಾಗಳನ್ನು ಮತ್ತೆ ತೆರೆಗೆ ತರುವ ಪ್ರಯತ್ನ ಕನ್ನಡ ಚಿತ್ರರಂಗದಲ್ಲಿ ಬಹಳ ಹಿಂದೆ ಶುರುವಾಯಿತು. ಇತ್ತೀಚೆಗೆ ಅದು ಹೆಚ್ಚಾಗಿದೆ. ದರ್ಶನ್, ಪುನೀತ್ ಹಾಗೂ ಉಪೇಂದ್ರ ಸಿನಿಮಾ ಹೆಚ್ಚು ಮರುಬಿಡುಗಡೆ ಆಗಿ ಸದ್ದು ಮಾಡಿವೆ. ಈ ಬಾರಿ ಸುದೀಪ್ ಹುಟ್ಟುಹಬ್ಬಕ್ಕೆ ಅಭಿಮಾನಿಗಳಿಗೆ ಚಿತ್ರಮಂದಿರಗಳಲ್ಲಿ ಸರ್‌ಪ್ರೈಸ್ ಕಾಡಿದೆ.

ಈ ಬಾರಿ ಅಭಿಮಾನಿಗಳ ಜೊತೆ ಹುಟ್ಟುಹಬ್ಬ ಆಚರಣೆಗೆ ಸುದೀಪ್ ಮುಂದಾಗಿದ್ದಾರೆ. ಸೆಪ್ಟೆಂಬರ್ 2ರಂದು ಅವರ 52ನೇ ಹುಟ್ಟುಹಬ್ಬ. ಆದರೆ ಅದಕ್ಕಿಂತ ಒಂದು ದಿನ ಮನ್ನ ಅಂದರೆ ಸೆಪ್ಟೆಂಬರ್ 1ರಂದು ರಾತ್ರಿಯೇ ಅಭಿಮಾನಿಗಳನ್ನು ಭೇಟಿ ಮಾಡುವುದಾಗಿ ಸುದೀಪ್ ಹೇಳಿದ್ದಾರೆ. ಅದು ಮನೆ ಬಳಿ ಅಲ್ಲ, ಬೇರೆ ಕಡೆ ಎಂದು ತಿಳಿಸಿದ್ದಾರೆ. ಆದರೆ ಮರುದಿನ ಅಭಿಮಾನಿಗಳು ಯಾರು ಮನೆ ಬಳಿ ಬರಬೇಡಿ ಎಂದು ಸುದೀಪ್ ಮನವಿ ಮಾಡಿದ್ದಾರೆ.

ತಮ್ಮ ಹುಟ್ಟುಹಬ್ಬ ಆಚರಣೆ ಬಗ್ಗೆ ಸುದೀಪ್ ಇತ್ತೀಚೆಗೆ ಪತ್ರ ಬರೆದು ಮಾಹಿತಿ ನೀಡಿದ್ದರು. ನಂದಿ ಲಿಂಕ್ಸ್ ಗ್ರೌಂಡ್‌ನಲ್ಲಿ ಸುದೀಪ್ ಹುಟ್ಟುಹಬ್ಬ ಆಚರಣೆ ನಡೆಯಬಹುದು ಎನ್ನಲಾಗ್ತಿದೆ. ಮಂಗಳವಾರ ಸುದೀಪ್ ಹುಟ್ಟುಹಬ್ಬ. ಆದರೆ ಶುಕ್ರವಾರ ಅವರು ನಟಿಸಿರುವ ವಿಷ್ಣುವರ್ಧನ ಸಿನಿಮಾ ತೆರೆಗೆ ಬರಲಿದೆ. ಪಿ. ಕುಮಾರ್ ನಿರ್ದೇಶನದ ಈ ಕಾಮಿಡಿ ಆಕ್ಷನ್ ಥ್ರಿಲ್ಲರ್ 2011ರಲ್ಲಿ ತೆರೆಗೆ ಬಂದಿತ್ತು.

ದ್ವಾರಕೀಶ್ ಚಿತ್ರ ಬ್ಯಾನರ್ ಅಡಿಯಲ್ಲಿ ಯೋಗೇಶ್ ದ್ವಾರಕೀಶ್ ಚಿತ್ರ ನಿರ್ಮಾಣ ಮಾಡಿದ್ದರು. ಸುದೀಪ್ ಜೊತೆ ಜಾಕಿ ಭಾವನಾ ಹಾಗೂ ಪ್ರಿಯಾಮಣಿ ನಾಯಕಿಯರಾಗಿ ನಟಿಸಿದ್ದರು. ಸೋನುಸೂದ್ ವಿಲನ್ ಆಗಿ ಅಬ್ಬರಿಸಿದ್ದರು. ಜಯಣ್ಣ ಫಿಲ್ಮ್ಸ್ ಸಿನಿಮಾ ವಿತರಣೆ ಮಾಡಿದ್ದರು. ಬಹಳ ಅದ್ದೂರಿಯಾಗಿ ವಿಷ್ಣುವರ್ಧನ ಸಿನಿಮಾ ಬಿಡುಗಡೆಯಾಗಿತ್ತು.

ಇನ್ನು ಸಿನಿಮಾ ಟೈಟಲ್ ವಿಚಾರವಾಗಿ ವಿವಾದ ಏರ್ಪಟ್ಟಿತ್ತು. ಭಾರತೀ ವಿಷ್ಣುವರ್ಧನ್ ಈ ಟೈಟಲ್ ಕೊಡಲ್ಲ ಎಂದಿದ್ದರು. ಆದರೆ ದ್ವಾರಕೀಶ್ ಪಟ್ಟು ಹಿಡಿದು ದಕ್ಕಿಸಿಕೊಂಡಿದ್ದರು. ಅಂದಹಾಗೆ ಈ ಕಥೆಯನ್ನು ನಟ ಗಣೇಶ್ ಕೇಳಿ ಮೆಚ್ಚಿದ್ದರು. ಆದರೆ ಸಿನಿಮಾ ಮಾಡಲು ಸಾಧ್ಯವಾಗಿರಲಿಲ್ಲ. ಅಂತಿಮವಾಗಿ ಚಿತ್ರದಲ್ಲಿ ಸುದೀಪ್ ನಟಿಸುವಂತಾಗಿತ್ತು.

ವಿಷ್ಣುವರ್ಧನ ಸಿನಿಮಾ ಮರು ಬಿಡುಗಡೆಗೆ ಇನ್ನೊಂದು ದಿನ ಬಾಕಿಯಿದೆ. ನಗರದ ಪ್ರಸನ್ನ ಸೇರಿ ರಾಜ್ಯದ ಕೆಲವೆಡೆ ಸಿನಿಮಾ ತೆರೆಗಪ್ಪಳಿಸಲಿದೆ. ಈಗಾಗಲೇ ಚಿತ್ರಮಂದಿರದ ಮುಂದೆ ಕಟೌಟ್ ನಿಲ್ಲಿಸಿ ಅಭಿಮಾನಿಗಳು ಸಂಭ್ರಮಾಚರಣೆಗೆ ಸಿದ್ಧತೆ ನಡೆಸಿದ್ದಾರೆ. ಸುದೀಪ್ ಜೊತೆ ಸಾಹಸಸಿಂಹ ವಿಷ್ಣುವರ್ಧನ್ ಕಟೌಟ್ ಕೂಡ ಇದೆ. ಈಗಾಗಲೇ ದಾದಾ ಸ್ಮಾರಕ ನಿರ್ಮಾಣಕ್ಕಾಗಿ ಸುದೀಪ್ ಕೆಂಗೇರಿ ಬಳಿ ಅರ್ಧ ಎಕರೆ ಜಾಗ ಖರೀದಿಸಿದ್ದಾರೆ.

ಕೆಂಗೇರಿ ಬಳಿ ವಿಷ್ಣು ದರ್ಶನ ಕೇಂದ್ರ, ಸ್ಥಾಪನೆಗಾಗಿ ಈಗಾಗಲೇ ಕೆಲಸಗಳು ಆರಂಭವಾಗಿದೆ. 25 ಅಡಿ ಪುತ್ಥಳಿ ನಿರ್ಮಿಸಲು ಈಗಾಗಲೇ ಮೂರ್ತಿ ತಯಾರಕರಿಗೆ ವಿಷ್ಣು ಅಭಿಮಾನಿಗಳು ಅಡ್ವಾನ್ಸ್ ಕೊಟ್ಟಿದ್ದಾರೆ. ಇನ್ನು ಸುದೀಪ್ ಹುಟ್ಟುಹಬ್ಬದ ದಿನ ಈ ಸ್ಮಾರಕದ ಬಗ್ಗೆ ಮತ್ತಷ್ಟು ಮಾಹಿತಿ ಸಿಗಲಿದೆ.

# ಡೆವಿಲ್ / 45 / ಕೆ47 : ಡಿಸೆಂಬರ್ ರಣರಂಗದಿಂದ ಯಾರಾದರೂ ಹಿಂದೆ ಸರಿಯುತ್ತಾರಾ? ಮುಂದಡಿ ಇಡುತ್ತಾರಾ?

ಸಾಮಾನ್ಯವಾಗಿ ಬೇರೆ ಭಾಷೆಗಳಿಗೆ ಹೋಲಿಸಿದರೆ ನಮ್ಮಲ್ಲಿ ಸ್ಟಾರ್‌ಗಳ ಚಿತ್ರಗಳು ಒಟ್ಟಿಗೆ ಬಿಡುಗಡೆಯಾಗುವುದು ಅಪರೂಪ. ಅಲ್ಲೊಮ್ಮೆ.. ಇಲ್ಲೊಮ್ಮೆ.. ಮಾತ್ರ ಜಿದ್ದಿಗೆ ಬಿದ್ದು ಕೆಲವರು ಈ ಹಿಂದೆ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಅಂದುಕೊಂಡ ಫಲಿತಾಂಶ ಸಿಕ್ಕಿದ್ದು ಕಡಿಮೆ. ಹೀಗಾಗಿಯೇ ಒಟ್ಟಿಗೆ ಸ್ಟಾರ್‌ಗಳ ಚಿತ್ರಗಳನ್ನು ಬಿಡುಗಡೆ ಮಾಡಿದರೆ ಅಥವಾ ಒಂದು ದೊಡ್ಡ ಚಿತ್ರ ತೆರೆಗೆ ಬಂದ ಒಂದು ವಾರದ..

ಆಚೀಚೆ ಮತ್ತೊಂದು ಚಿತ್ರವನ್ನು ಬಿಡುಗಡೆ ಮಾಡಿದರೆ ಆಗ ನಷ್ಟವಾಗುವುದು ಚಿತ್ರರಂಗಕ್ಕೇನೇ ಎಂಬ ಅಭಿಪ್ರಾಯವನ್ನು ಹಲವರು ವ್ಯಕ್ತಪಡಿಸುತ್ತಾರೆ. ಇನ್ನು ಒಂದು ವಾರದ ಅಂತರದಲ್ಲಿ ಅಥವಾ ಒಂದೇ ದಿನ ಸ್ಟಾರ್‌ಗಳ ಚಿತ್ರ ಬಿಡುಗಡೆಯಾದರೆ ಪ್ರೇಕ್ಷಕರು ಕೂಡ ಗೊಂದಲಕ್ಕೀಡಾಗುತ್ತಾರೆ. ಆದರೂ ಕೂಡ.. ಈ ಸಾಹಸವನ್ನು ಆಗಾಗ ಮಾಡಲಾಗುತ್ತೆ. ಇದಕ್ಕೆ ಸದ್ಯದ ಬೆಳವಣಿಗೆ ಉದಾಹರಣೆ.

ಹೌದು, ದರ್ಶನ್ ಜೈಲಿನಲ್ಲಿದ್ದರೂ ಕೂಡ ಇಂದು (ಆಗಸ್ಟ್ 24) ದರ್ಶನ್ ಅವರ ಅಭಿಮಾನಿಗಳಲ್ಲೊಂದು ಖುಷಿ ಇದೆ. ಅದಕ್ಕೆ ಕಾರಣ ಒಂದು ಡೆವಿಲ್ ಚಿತ್ರದ ಹಾಡಾದರೆ ಮತ್ತೊಂದು ಚಿತ್ರದ ಬಿಡುಗಡೆಯ ದಿನಾಂಕ.

ತಮ್ಮ ನೆಚ್ಚಿನ ನಾಯಕನ ಚಿತ್ರ ಈ ಡಿಸೆಂಬರ್ 12ಕ್ಕೆ ಬೆಳ್ಳಿತೆರೆಯಲ್ಲಿ ಧಗಧಗಿಸಲಿದೆ ಎಂಬ ಸುದ್ದಿ ಹೊರ ಬಂದ ಮರು ಕ್ಷಣದಿಂದ ದರ್ಶನ್ ಅಭಿಮಾನಿಗಳು ಸಂಭ್ರಮ ಪಡುತ್ತಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಚಿತ್ರದ ರಿಲೀಸ್ ಪೋಸ್ಟರ್ ಮತ್ತು ಹಾಡು ಶೇರ್ ಮಾಡಿಕೊಂಡು ತಮ್ಮ ಅಭಿಮಾನದ ಪ್ರದರ್ಶನ ಮಾಡುತ್ತಿದ್ದಾರೆ.

ಆದರೆ ಇದೇ ಸಮಯದಲ್ಲಿ ಈ ಕೊನೆ ಕ್ಷಣದ ಸರ್ಕಸ್

ಕನ್ನಡ ಚಿತ್ರರಂಗಕ್ಕೆ ಮುಳುವಾಗುತ್ತಾ ಎನ್ನುವ ಚಿಂತೆ ಕೂಡ ಈಗ ಗಾಂಧಿನಗರದಲ್ಲಿ ಹಲವರನ್ನು ಕಾಡುತ್ತಿದೆ.

ಹೌದು, ಅಸಲಿಗೆ ಇದೇ ಡಿಸೆಂಬರ್‌ನಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಶಿವರಾಜ್ ಕುಮಾರ್, ಉಪೇಂದ್ರ ಮತ್ತು ರಾಜ್ ಬಿ ಶೆಟ್ಟಿ ಅಭಿನಯದ ಅರ್ಜುನ್ ಜನ್ಯ ನಿರ್ದೇಶನದ ಚೊಚ್ಚಲ ಚಿತ್ರ 45 ತೆರೆಗೆ ಬರುತ್ತಿದೆ. ಮೊನ್ನೆ ಮೊನ್ನೆಯಷ್ಟೇ ಈ ಕುರಿತು ಘೋಷಣೆಯನ್ನು ಕೂಡ ಮಾಡಲಾಗಿದೆ.



ಮತ್ತೊಂದು ಕಡೆ ಕಿಚ್ಚ ಸುದೀಪ್ ತಮ್ಮ ಮ್ಯಾಕ್ಸ್ ಚಿತ್ರದ ನಿರ್ದೇಶಕ ವಿಜಯ್ ಕಾರ್ತಿಕೇಯ ಜೊತೆ ಮತ್ತೊಂದು ಚಿತ್ರವನ್ನು ಮಾಡುತ್ತಿದ್ದಾರೆ. ಇನ್ನೂ ಹೆಸರಿಡದ ಈ ಚಿತ್ರದ ಚಿತ್ರೀಕರಣ ಸದ್ಯ ಭರದಿಂದ ನಡೆಯುತ್ತಿದ್ದು ಸುದೀಪ್ ಕೂಡ ತಮ್ಮ ಈ ಚಿತ್ರವನ್ನು ಇದೇ ಡಿಸೆಂಬರ್‌ನಲ್ಲಿ ತೆರೆಗೆ ತರುವ ಯೋಚನೆ ಮಾಡಿದ್ದಾರೆ. ಆ ಯೋಜನೆಯಡಿಯೇ ಚಿತ್ರೀಕರಣ ಮಾಡುತ್ತಿದ್ದಾರೆ.

ಈ ಹಿನ್ನೆಲೆ.. ಕೇವಲ ಒಂದೊಂದು ವಾರದ ಅಂತರದಲ್ಲಿ ಈ ಮೂರು ದೊಡ್ಡ ಚಿತ್ರಗಳು ಒಟ್ಟಿಗೆ ತೆರೆಗೆ ಬಂದರೆ ಹೇಗೆ ? ಎನ್ನುವ ಯಕ್ಷ ಪ್ರಶ್ನೆ ಸದ್ಯಕ್ಕೆ ಹಲವರಲ್ಲಿದೆ. ಒಂದು ವೇಳೆ ಮೂರು ವಾರದ ಅಂತರದಲ್ಲಿ ಈ ಮೂರು ಚಿತ್ರಗಳು ತೆರೆಗೆ ಬಂದರೆ ವ್ಯಾಪಾರ ವಹಿವಾಟಿನ ಮೇಲೆ ಕೂಡ ಪರಿಣಾಮ ಬೀರುವ ಸಾಧ್ಯತೆ ಇದೆ. ಡೆವಿಲ್ ಮತ್ತು 45 ಚಿತ್ರತಂಡ ಸದ್ಯ ಮುಂದಡಿ ಅಥವಾ ಹಿಂದಡಿ ಇಡುವುದು ಅನುಮಾನವಾದ ಹಿನ್ನೆಲೆ ಸುದೀಪ್ ತಮ್ಮ ಚಿತ್ರದ ಬಿಡುಗಡೆಯನ್ನು ಮುಂದಕ್ಕೂಡುತ್ತಾರಾ? ಎನ್ನುವ ಕುತೂಹಲ ಕೂಡ ಈಗ ಮನೆ ಮಾಡಿದೆ.

ಇನ್ನುಳಿದಂತೆ ಡೆವಿಲ್ ಚಿತ್ರಕ್ಕೆ ನಿರ್ದೇಶಕ ಮಿಲನಾ ಪ್ರಕಾಶ್ ಅವರೇ ನಿರ್ಮಾಣ ಮಾಡಿದ್ದಾರೆ. ಸರಿಗಮಪ ಸಂಸ್ಥೆ ಕೂಡ ನಿರ್ಮಾಣದಲ್ಲಿ ಕೈ ಜೋಡಿಸಿದೆ. ಇನ್ನು 45 ಚಿತ್ರಕ್ಕೆ ರಮೇಶ್ ರೆಡ್ಡಿ ಬಂಡವಾಳ ಹೂಡಿದ್ದಾರೆ. ಪ್ಯಾನ್ ಇಂಡಿಯಾ ಕಾನ್ಸೆಪ್ಟ್‌ನಡಿ ಈ ಚಿತ್ರ ತೆರೆಗೆ ಬರಲಿದೆ. ಸುದೀಪ್ ಚಿತ್ರವನ್ನು ಸತ್ಯ ಜ್ಯೋತಿ ಫಿಲ್ಮ್ಸ್ ನಿರ್ಮಾಣ ಮಾಡುತ್ತಿದೆ.

## 29-8-2025 ದಿನ ಭವಿಷ್ಯ

**ಮೇಷ:** ನಿಮ್ಮ ವಿಶ್ವಾಸ ಮತ್ತು ಚೈತನ್ಯ ಅಧಿಕವಾಗಿರುತ್ತದೆ. ಇಂದು ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ನೀವು ಮಾನಸಿಕ ಶಾಂತಿಯನ್ನು ಪಡೆಯುವ ಸಂಪೂರ್ಣ ಸಾಧ್ಯತೆ ಇದೆ. ನಿಮ್ಮ ಜೊತಗಿರುವವರ ಜೊತೆ ವಾದವಿವಾದಕ್ಕೆ ತೊಡಗಬೇಡಿ. ಯಾವುದೇ ಭಿನ್ನಾಭಿಪ್ರಾಯದ ವಿಷಯಗಳಿದ್ದಲ್ಲಿ - ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳಿ.

**ವೃಷಭ:** ಮುಂದೆ ಒಳ್ಳೆಯ ಸಮಯವಿರುವುದರಿಂದ ಸಂತೋಷ ದಿಂದಿರಿ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರು ಪಾವತಿಸಬೇಕಾಗುತ್ತದೆ, ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ. ನಿಮ್ಮ ಕೆಲವು ಸ್ನೇಹಿತರು ನಿಮ್ಮ ಮನೆಗೆ ಬರಬಹುದು

**ಮಿಥುನ:** ನೀವು ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳುತ್ತಿರದಿದ್ದಲ್ಲಿ ನಿಮಗೆ ತುಂಬಾ ದಣಿವಾದಂತೆನಿಸುತ್ತದೆ ಮತ್ತು ನಿಮಗೆ ಅಧಿಕ ವಿಶ್ರಾಂತಿ ಬೇಕಾಗುತ್ತದೆ. ಆರ್ಥಿಕ ಜೀವನದ ಸ್ಥಿತಿ ಇಂದು ಉತ್ತಮವಾಗಿದೆ ಎಂದು ಹೇಳಲಾಗುವುದಿಲ್ಲ, ಇಂದು ನಿಮ್ಮನ್ನು ಉಳಿಸಲು ನಿಮಗೆ ಕಷ್ಟವಾಗಬಹುದು. ಕಾರ್ಯಕ್ಷೇತ್ರದಲ್ಲಿ ಹೃದಯವನ್ನು ಇಡುವುದನ್ನು ತಪ್ಪಿಸಿ.

**ಕರ್ಕಾಟಕ:** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು.

**ಸಿಂಹ:** ನಿಮ್ಮ ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು. ನಿಮ್ಮನ್ನು ತನ್ನ ಜೀವಕ್ಕಿಂತಲೂ ಹೆಚ್ಚು ಪ್ರೀತಿಸುವ ವ್ಯಕ್ತಿಯನ್ನು ಸಂಧಿಸುತ್ತೀರಿ.

**ಕನ್ಯಾ:** ಮನೆಯಲ್ಲಿ ಕೆಲಸ ಮಾಡುವಾಗ ವಿಶೇಷ ಎಚ್ಚರ ವಹಿಸಿ. ಮನೆ ಬಳಕೆಯ ವಸ್ತುಗಳ ಯಾವುದೇ ಅಸಡ್ಡೆಯ ಬಳಕೆ ನಿಮಗೆ ಸಮಸ್ಯೆ ಉಂಟುಮಾಡಬಹುದು. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ.

**ತುಲಾ:** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ.

**ವೃಶ್ಚಿಕ:** ಧ್ಯಾನ ಮತ್ತು ಆತ್ಮ ಸಾಕ್ಷಾತ್ಕಾರ ಪ್ರಯೋಜನಕಾರಿಯಾಗಬಹುದು. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನಿಮ್ಮ ಮನೆಯ ಕರ್ತವ್ಯಗಳನ್ನು ನೀವು ನಿರ್ಲಕ್ಷಿಸಿದ್ದಲ್ಲಿ ನಿಮ್ಮ ಜೊತೆಗಿರುವ ಯಾರಾದರೂ ಸಿಟ್ಟಾಗಬಹುದು. ನಿಮ್ಮ ಪ್ರೀತಿಯ ಕಥೆ ಇಂದು ಒಂದು ಹೊಸ ತಿರುವು ತೆಗೆದುಕೊಳ್ಳಬಹುದು


**ಧನು:** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಕುಟುಂಬದ ಜೊತೆಗೆ ಸಾಮಾಜಿಕ ಚಟುವಟಿಕೆಗಳು ತುಂಬ ಸಂತೋಷಕರವಾಗಿರುತ್ತವೆ. ನಿಮ್ಮ ಪ್ರೀತಿಪಾತ್ರರ ಅನಗತ್ಯ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಡಿ.

**ಮಕರ:** ನೀವು ಕೆಲವು ಉನ್ನತ ವ್ಯಕ್ತಿಗಳನ್ನು ಭೇಟಿಯಾಗಬಹುದಾದ್ದರಿಂದ ಗಾಬರಿಯಾಗಬೇಡಿ ಮತ್ತು ವಿಶ್ವಾಸ ಕಳೆದುಕೊಳ್ಳದಿರಿ. ಇದು ವ್ಯಾಪಾರಕ್ಕೆ ಬಂಡವಾಳದಂತೆ ಉತ್ತಮ ಆರೋಗ್ಯಕ್ಕೆ ಅಗತ್ಯವಾಗಿದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು.

**ಕುಂಭ:** ನಿಮ್ಮ ಒತ್ತಡವನ್ನು ನೀವು ತೊಡೆದುಹಾಕಬಹುದು. ನಿಮ್ಮ ಸ್ನೇಹಿತರೊಬ್ಬರು ಇಂದು ದೊಡ್ಡ ಸಾಲವನ್ನು ಕೇಳಬಹುದು, ನೀವು ಅವರಿಗೆ ಈ ಹಣವನ್ನು ಕೊಟ್ಟರೆ, ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಒಂದು ವೈವಾಹಿಕ ಸಂಬಂಧವನ್ನು ಹೊಂದಲು ಒಳ್ಳೆಯ ಸಮಯ. ಕೆಲಸದ ಒತ್ತಡ ಹೆಚ್ಚುತ್ತಿದ್ದ ಹಾಗೆ ಮಾನಸಿಕ ಕ್ಷೋಭೆ ಮತ್ತು ಪ್ರಕ್ಷುಬ್ಧತೆ.

**ಮೀನ:** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣವನ್ನು ಖರ್ಚುಮಾಡಬಹುದು ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ದೂರು ನೀಡಲು ಯಾವುದೇ ಅವಕಾಶ ನೀಡಬೇಡಿ. ನಿಮ್ಮ ಪ್ರೀತಿಪಾತ್ರರ ಅನಗತ್ಯ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಡಿ.

# ಧ್ರುವ ಸರ್ಜಾ ಚಿತ್ರಕ್ಕೆ ಸುಕ್ಕಾ ಸೂರಿ ಆಕ್ಷನ್ ಕಟ್? ಅದು ಯಾವ ಕಾಲಕ್ಕೋ?



ದುನಿಯಾ ಸೂರಿ ಹಾಗೂ ಧ್ರುವ ಸರ್ಜಾ ಇಬ್ಬರಿಗೂ ದೊಡ್ಡ ಬ್ರೇಕ್ ಬೇಕಿದೆ. ಸದ್ಯ ಇಬ್ಬರೂ ಬೇರೆ ಬೇರೆ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಮುಂದೆ ಇಬ್ಬರೂ ಒಟ್ಟಿಗೆ ಸಿನಿಮಾ ಮಾಡುವ ಬಗ್ಗೆ ಚರ್ಚೆ ನಡೆಸಿದ್ದಾರೆ ಎನ್ನಲಾಗ್ತಿದೆ. ಅಧಿಕೃತವಾಗಿ ಈ ಬಗ್ಗೆ ಇನ್ನು ಯಾವುದೇ ಮಾಹಿತಿ ಸಿಕ್ಕಿಲ್ಲ.

ವಿಭಿನ್ನ ಕಥೆ, ಸ್ಕ್ರೀನ್‌ಪ್ಲೇ ಹಾಗೂ ರಿಯಲಿಸ್ಟಿಕ್ ರಾ ಮೇಕಿಂಗ್ ಚಿತ್ರಗಳಿಂದ ಗಮನ ಸೆಳೆದವರು ಸೂರಿ. ಖಡಕ್ ಆಕ್ಷನ್ ಸಿನಿಮಾಗಳಿಂದ ಅಭಿಮಾನಿಗಳನ್ನು ರಂಜಿಸಿದವರು ಧ್ರುವ ಸರ್ಜಾ. ಇವರಿಬ್ಬರೂ ಒಟ್ಟಿಗೆ ಸೇರಿ ಸಿನಿಮಾ ಮಾಡಿದರೆ ಮಾಸ್ ಪ್ರೇಕ್ಷಕರಿಗೆ ಹಬ್ಬವೇ ಸರಿ. ಸದ್ಯ ಕೆಡಿ ಚಿತ್ರದಲ್ಲಿ ಧ್ರುವ ನಟಿಸುತ್ತಿದ್ದಾರೆ. ಮುಂದೆ ಕೆರೆಬೇಟೆ ಸಿನಿಮಾ ಖ್ಯಾತಿಯ ನಿರ್ದೇಶಕ ರಾಜ್ ಗುರು ಜೊತೆ ಕೈಜೋಡಿಸುತ್ತಾರೆ ಎನ್ನಲಾಗ್ತಿದೆ. ಈ ನಡುವೆ ಸೂರಿ ನಿರ್ದೇಶನದಲ್ಲಿ ನಟಿಸುತ್ತಾರೆ ಎನ್ನುವ ಮಾತುಗಳು ಕೇಳಿಬರ್ತಿದೆ. ನರ್ತನ್ ಜೊತೆಗೂ ಸಿನಿಮಾ ಮಾಡುವ ಬಗ್ಗೆ ಚರ್ಚೆ ನಡೆದಿದೆ ಎನ್ನುವ ಮಾಹಿತಿ ಲಭ್ಯವಾಗಿತ್ತು.

ಟಗರು ಬಳಿಕ ಸೂರಿ ನಿರ್ದೇಶನದ ಸಿನಿಮಾಗಳು ಗೆಲ್ಲುತ್ತಿಲ್ಲ. ಹಾಗಂತ ಒಂದರ ಹಿಂದೆ ಒಂದು ಸಿನಿಮಾ ಅವರು ಮಾಡ್ತಿಲ್ಲ. ಅಭಿಮಾನಿಗಳು ಕಾದು ಕಾದು ಸುಸ್ತಾಗಿದ್ದಾರೆ. ಟಗರು-2 ಬರಬಹುದು ಎನ್ನುವ ಲೆಕ್ಕಾಚಾರವೂ ಇದೆ. ಆದರೆ ಅದಕ್ಕೆ ಇನ್ನು ಕಾಲ ಕೂಡಿ ಬಂದಿಲ್ಲ. ಬ್ಯಾಡ್ ಮ್ಯಾನರ್ಸ್ ಸೋಲಿನ ಬಳಿಕ ಯುವ ರಾಜ್‌ಕುಮಾರ್ ಜೊತೆ ಸೂರಿ ಸಿನಿಮಾ ಮಾಡ್ತಿದ್ದಾರೆ. ಈಗಾಗಲೇ ಸಿನಿಮಾ ಸೆಟ್ಟೇರಿದ್ದು ಶೀಘ್ರದಲ್ಲೇ ಚಿತ್ರೀಕರಣ ಶುರುವಾಗಲಿದೆ.

ಯುವ, ಎಕ್ಕ ಬಳಿಕ ಇದು ಯುವ ರಾಜ್‌ಕುಮಾರ್ ನಟನೆಯ 3ನೇ ಸಿನಿಮಾ. ಪಿಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ ಫಿಲಮ್ಸ್ ಹಾಗೂ ಕೆಆರ್‌ಜಿ ಸ್ಟುಡಿಯೋಸ್ ಸಂಸ್ಥೆಗಳು ಈ ಚಿತ್ರವನ್ನು ನಿರ್ಮಾಣ ಮಾಡ್ತಿವೆ. ಯುವ ರಾಜ್‌ಕುಮಾರ್ ಜೋಡಿಯಾಗಿ ದುನಿಯಾ ವಿಜಯ್ ಪುತ್ರಿ ರಿತನ್ಯಾ ನಟಿಸುವುದು ಖಚಿತವಾಗಿದೆ. ಇದು ಸೂರಿ ಕನಸಿನ ಕಾಗೆ ಬಂಗಾರ-3 ಕಥೆ ಎನ್ನುವ ಊಹಾಪೋಹ ಕೂಡ ಇದೆ. ಆದರೆ ಈ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಮುಂದಿನ ವರ್ಷವೇ ಸೂರಿ ಜೊತೆಗಿನ ಸಿನಿಮಾ ತೆರೆಗೆ ಬರುವ ನಿರೀಕ್ಷೆಯಿದೆ.

ಸೂರಿ ಹಾಗೂ ಧ್ರುವ ಸರ್ಜಾ ಭೇಟಿಯಾಗಿ ಸಿನಿಮಾ ಮಾಡುವ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಗಾಂಧಿನಗರದಲ್ಲಿ ಗುಲ್ಲಾಗಿದೆ. ಆದರೆ ಕಥೆ, ಬ್ಯಾನರ್ ಯಾವುದು ಫೈನಲ್ ಆಗಿಲ್ಲವಂತೆ. ಆಕ್ಷನ್ ಪ್ರಿನ್ಸ್ ಅಭಿಮಾನಿಗಳು ಕೆಡಿ ಚಿತ್ರಕ್ಕಾಗಿ ಕಾಯುತ್ತಿದ್ದಾರೆ. ಈ ಸಿನಿಮಾ ಯಾವಾಗ ರಿಲೀಸ್ ಎನ್ನುವುದು ಯಾರಿಗೂ ಗೊತ್ತಿಲ್ಲ. ಹಾಗಾಗಿ ಸೂರಿ-ಧ್ರುವ ಜೋಡಿಯ ಸಿನಿಮಾ ಶುರುವಾಗುವುದು ಯಾವಾಗ? ಬಿಡುಗಡೆಯಾಗುವುದು ಯಾವ ಕಾಲಕ್ಕೋ? ಎಂದು ಕೆಲವರು ಕಾಮೆಂಟ್ ಮಾಡುತ್ತಿದ್ದಾರೆ.

ಸ್ಟಾರ್ ನಟರು, ನಿರ್ದೇಶಕರು ಬೇಗ ಬೇಗ ಸಿನಿಮಾ ಮಾಡಬೇಕು, ವರ್ಷಕ್ಕೆ ಒಂದೆರಡು ಸಿನಿಮಾ ಮಾಡಬೇಕು ಎನ್ನುವ ಕೂಗು ಕೇಳಿಬರುತ್ತಲೇ ಇದೆ. ಆದರೆ ಈ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳುತ್ತಿಲ್ಲ. ನಾವು ಮಾಡಿದಾಗಲೇ ಸಿನಿಮಾ ಎನ್ನುವ ಮನೋಭಾವನೆ ಕೆಲವರದ್ದು. ಧ್ರುವ ಸರ್ಜಾ ಪ್ರತಿ ಚಿತ್ರಕ್ಕೆ ಮೂರ್ನಾಲ್ಕು ವರ್ಷ ಸಮಯ ವ್ಯಯಿಸುತ್ತಿದ್ದಾರೆ. ಆದರೆ ಭರ್ಜರಿ ಬಳಿಕ ಬಂದ ಅವರ ಸಿನಿಮಾಗಳು ಗೆಲ್ಲಲೇ ಇಲ್ಲ. ಒಂದ್ಕಾಲದಲ್ಲಿ ಬ್ಲಾಕ್‌ಬಸ್ಟರ್ ಹಿಟ್ಸ್ ಕೊಟ್ಟ ಸೂರಿ ಕೂಡ ಈಗ ಸಿನಿಮಾ ಮಾಡುವ ವೇಗ ತಗ್ಗಿಸಿದ್ದಾರೆ. ಹಾಗಾಗಿ ಸೂರಿ-ಧ್ರುವ ಜೋಡಿ ಸಿನಿಮಾ ನೋಡಲು ಪ್ರೇಕ್ಷಕರು ಇನ್ನೆರಡು ವರ್ಷ ಕಾಯಬೇಕು ಅನ್ನಿಸುತ್ತದೆ.

# ಯಶ್ ರಾಮಾಯಣ ಚಿತ್ರಕ್ಕೆ ಕೈ ಜೋಡಿಸುತ್ತಾರಾ ಜೋಗಿ ಪ್ರೇಮ್? ಏನಿದು ವೈರಲ್ ನ್ಯೂಸ್?

ನಿತೇಶ್ ತಿವಾರಿ ನಿರ್ದೇಶನದ ರಾಮಾಯಣ ಸಿನಿಮಾ ದೊಡ್ಡದಾಗಿ ಸದ್ದು ಮಾಡುವ ಸುಳಿವು ಸಿಕ್ತಿದೆ. ರಾಮಾಯಣ ಕಥೆಯನ್ನು ಪ್ರಪಂಚಕ್ಕೆ ಹೇಳುವ ಪ್ರಯತ್ನ ಇದು ಎಂದು ಚಿತ್ರತಂಡ ಹೇಳ್ತಿದೆ. 4000 ಕೋಟಿ ರೂ. ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿರುವುದಾಗಿ ನಿರ್ಮಾಪಕರೇ ಹೇಳಿದ್ದಾರೆ. ಇನ್ನು ಶ್ರೀರಾಮನಾಗಿ ರಣ್‌ಬೀರ್ ಕಪೂರ್, ಸೀತೆಯಾಗಿ ಸಾಯಿ ಪಲ್ಲವಿ, ರಾವಣನಾಗಿ ಯಶ್ ನಟಿಸುತ್ತಿರುವುದು ನಿರೀಕ್ಷೆ ಹುಟ್ಟಾಕ್ಕಿದೆ.

ಎರಡು ಭಾಗಗಳಾಗಿ ರಾಮಾಯಣ ಸಿನಿಮಾ ಪ್ರೇಕ್ಷಕರ ಮುಂದೆ ಬರ್ತಿದೆ. ಮೊದಲ ಭಾಗ ಮುಂದಿನ ವರ್ಷ ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಬಿಡುಗಡೆ ಆಗಲಿದೆ. ಈಗಾಗಲೇ 2ನೇ ಭಾಗದ ಚಿತ್ರೀಕರಣ ಕೂಡ ಶುರುವಾಗಿದೆ ಎನ್ನಲಾಗ್ತಿದೆ. ಹಾಲಿವುಡ್ ತಂತ್ರಜ್ಞರು ಚಿತ್ರಕ್ಕಾಗಿ ಕೆಲಸ ಮಾಡುತ್ತಿದ್ದಾರೆ. ಎ. ಆರ್ ರಹಮಾನ್ ಜೊತೆಗೆ ಹಾಲಿವುಡ್ ಮ್ಯೂಸಿಕ್ ಡೈರೆಕ್ಟರ್ ಹ್ಯಾನ್ಸ್ ಜಿಮ್ಮರ್ ಟ್ಯೂನ್ ಹಾಕುತ್ತಿದ್ದಾರೆ.

ಅಂದಹಾಗೆ ರಾಮಾಯಣ ಚಿತ್ರದ ಹಾಡಿಗೆ ಜೋಗಿ ಪ್ರೇಮ್ ಸಾಹಿತ್ಯ ಬರೆಯುತ್ತಾರೆ ಎನ್ನುವ ಗುಸುಗುಸು ಶುರುವಾಗಿದೆ. ಸಿನಿಮಾ ದೇಶ ವಿದೇಶದ ಭಾಷೆಗಳಿಗೆ ಡಬ್




ಆಗಲಿದೆ. ಅದೇ ರೀತಿ ಕನ್ನಡ ವರ್ಷನ್ ಸಿನಿಮಾ ಹಾಡುಗಳಿಗೆ ಪ್ರೇಮ್ ಸಾಹಿತ್ಯ ಬರೆಯುತ್ತಾರೆ ಎಂದು ಯಾರೋ ಸುದ್ದಿ ತೇಲಿ ಬಿಟ್ಟಿದ್ದಾರೆ. ಆದರೆ ಇದೆಲ್ಲಾ ಫೇಕ್ ಎನ್ನಲಾಗ್ತಿದೆ. ಯಾರೋ ಜೋಗಿ ಪ್ರೇಮ್ ಅಭಿಮಾನಿಗಳು ಈ ರೀತಿ ಕಲ್ಪಿಸಿಕೊಂಡು ಸುದ್ದಿ ಹರಿಬಿಟ್ಟಿರುವ ಸಾಧ್ಯತೆಯಿದೆ.

ಪ್ರೇಮ್ ಸಿನಿಮಾಗಳಲ್ಲಿ ಹಾಡುಗಳು ಹಿಟ್ ಆಗುತ್ತದೆ. ಅವರಿಗೆ ಸಂಗೀತ ಪ್ರೇಮಿಗಳ ನಾಡಿಮಿಡಿತ ಗೊತ್ತಿದೆ. ಅಷ್ಟೇ ಅಲ್ಲ, ಅವರ ಸಿನಿಮಾ ಹಾಡುಗಳ ಸಾಹಿತ್ಯವೂ ಹಿಟ್ ಆಗುತ್ತದೆ. ತಮ್ಮ ಸಿನಿಮಾ ಗೀತೆಗಳಿಗೆ ತಾವೇ ಸಾಹಿತ್ಯ ಬರೆದಿರುವುದು ಇದೆ. ಅದೆಲ್ಲವೂ ಹಿಟ್ ಆಗಿದೆ. ಚಿತ್ರದ ಸೆಟ್ ಆಗಲ್ಲ ಹೋಗೆ ನಂಗೂ ನಿಂಗೂ ಹಾಡಿಗೂ ಪ್ರೇಮ್ ಪದಗಳನ್ನು ಪೋಣಿಸಿದ್ದಾರೆ.

ಜೋಗಿ ಚಿತ್ರದ ಬೇಡುವೆನು ವರವನ್ನು, ಹೊಡಿ ಮಗಾ ಹೊಡಿ ಮಗಾ ಅದೇ ರೀತಿ ಜೋಗಯ್ಯ ಚಿತ್ರಕ್ಕಾಗಿ ಓಡೋಲೆ ಇನ್ನು ಡಿಕೆ ಚಿತ್ರಕ್ಕೆ ಸೇಸಮ್ಮ ಸೇಸಮ್ಮ, ದಿ ವಿಲನ್ ಚಿತ್ರಕ್ಕಾಗಿ ಟಿಕ್ ಟಿಕ್ ಟಿಕ್, ಲವ್ ಆಗೋಯ್ತು, ರಣ ರಣ ರಾವಣ ಇನ್ನು ಏಕ್ ಲವ್ ಯಾ ಚಿತ್ರಕ್ಕೆ ಹೇಳು ಯಾಕೆ ಹೀಗೆ ಹಲವು ಹಿಟ್ ಗೀತೆಗಳಿಗೆ ಪ್ರೇಮ್ ಸಾಹಿತ್ಯ ಬರೆದಿದ್ದಾರೆ. ಹಾಗಾಗಿ ಅಭಿಮಾನಿಗಳು ಪ್ರೇಮ್ ರಾಮಾಯಣ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದರೆ ಚೆನ್ನಾಗಿರುತ್ತದೆ ಎಂದು ಊಹಿಸಿಕೊಂಡು ಹೀಗೊಂದು ಸುದ್ದಿ ವೈರಲ್ ಮಾಡಿರುವಂತೆ ಕಾಣ್ತಿದೆ.

ರಾಮಾಯಣ ಬಹಳ ದೊಡ್ಡ ಸಿನಿಮಾ. ಪ್ರತಿ ವಿಭಾಗದಲ್ಲಿ ಅದ್ಭುತ ತಂತ್ರಜ್ಞರು ಕೆಲಸ ಮಾಡುತ್ತಿದ್ದಾರೆ. ಲಕ್ಷ್ಮಣನಾಗಿ ರವಿ ದುಬೆ, ಮಂಡೋದರಿಯಾಗಿ ಕಾಜಲ್ ಅಗರ್‌ವಾಲ್, ಶೂರ್ಪನಖಿಯಾಗಿ ರಕುಲ್, ದಶರಥನಾಗಿ ಅರುಣ್ ಗೋವಿಲ್ ಹೀಗೆ ಘಟಾನುಘಟಿ ಕಲಾವಿದರು ನಟಿಸುತ್ತಿದ್ದಾರೆ. ಚಿತ್ರದ ಆಲ್ಬಮ್ ಬಗ್ಗೆಯೂ ಬಹಳ ನಿರೀಕ್ಷೆಯಿದೆ. ಕನ್ನಡ ಹಾಡುಗಳಿಗೆ ಯಾರು ಸಾಹಿತ್ಯ ಬರೆಯುತ್ತಾರೆ ಎನ್ನುವ ಕುತೂಹಲ ಕೂಡ ಇದೆ.

ಐಮ್ಯಾಕ್ಸ್ ವರ್ಷನ್‌ನಲ್ಲಿ ನಿತೇಶ್ ತಿವಾರಿ ರಾಮಾಯಣ ಸಿನಿಮಾ ತೆರೆಗೆ ಬರಲಿದೆ. ಹಾಲಿವುಡ್ ಸಂಸ್ಥೆಗಳು ಚಿತ್ರಕ್ಕಾಗಿ ಜೋಡಿಸುತ್ತಿವೆ. ನಮಿತ್ ಮಲ್ಹೋತ್ರಾ ಜೊತೆ ಸೇರಿ ಯಶ್ ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಇದು ಸಹಜವಾಗಿಯೇ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

